**ಕರ್ನಾಟಕ ಸರ್ಕಾರ**
**ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,**
**ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು-560 002**
**(ಕರ್ನಾಟಕ ಸರ್ಕಾರದ ಅಂಗೀಕೃತ ಸಂಸ್ಥೆ)**
**Wbesite:- www.karunadu.gov.in/dmekarnataka; www.bmcalumini.com** Ph: 080-2670 5883

ಸಂಖ್ಯೆ: ಪಿಎಂಎಸ್ಎಸ್‌ವೈ/ಎಸ್ಎಸ್‌ಹೆಚ್/28/2011-12 ದಿನಾಂಕ: 26/12/2011

**ಶುಶ್ರೂಷಕ (ಸ್ಟಾಫ್‌ನರ್ಸ್)200 ಹುದ್ದೆಗಳಿಗೆ ಅರ್ಜಿ ಆಹ್ವಾನ**

ಸಿಬ್ಬಂದಿ ನೇಮಕಾತಿ ಪ್ರಾಧಿಕಾರ, ಪಿಎಂಎಸ್ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇವರಿಂದ ರೂ.8825–16000 ವೇತನ ಶ್ರೇಣಿ ಹೊಂದಿರುವ 200 ಶುಶ್ರೂಷಕರ ಹುದ್ದೆಗಳಿಗೆ ನಿಗದಿತ ನಮೂನೆಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

1. **ಕನಿಷ್ಠ ವಿದ್ಯಾರ್ಹತೆ**

**ಶುಶ್ರೂಷಕರು:** ಪಿ.ಯು.ಸಿ (10+2 ಅಥವಾ ಸಮಾನಾಂತರ) ಮತ್ತು ಕರ್ನಾಟಕ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಬಿ.ಎಸ್ಸಿ. ನರ್ಸಿಂಗ್ ಪದವಿ ಹೊಂದಿರತಕ್ಕದು ಮತ್ತು ಕರ್ನಾಟಕ ಶುಶ್ರೂಷಕ ಪರಿಷತ್ತಿನಲ್ಲಿ ನೊಂದಣಿ ಮಾಡಿಸಿರುವ ಪ್ರಮಾಣಪತ್ರವನ್ನು ಹೊಂದಿರತಕ್ಕದು ಹಾಗೂ ಸೂಪರ್ ಸ್ಪೆಷಾಲಿಟಿ ವಿಭಾಗಗಳಲ್ಲಿರುವ ಆಸ್ಪತ್ರೆಗಳಲ್ಲಿ 1 ವರ್ಷ ಕಾರ್ಯಾನುಭವ ಹೊಂದಿರತಕ್ಕದು.

ಅಥವಾ

ಪಿ.ಯು.ಸಿ (10+2 ಅಥವಾ ಸಮಾನಾಂತರ) ಮತ್ತು ಜಿಎನ್ಎಂ ಅಥವಾ ಡಿಪ್ಲೋಮಾ ಇನ್ ನರ್ಸಿಂಗ್ (3½ ವರ್ಷ) ಕರ್ನಾಟಕ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಾಗಿರಬೇಕು. ಮತ್ತು ಕರ್ನಾಟಕ ಶುಶ್ರೂಷಕ ಪರಿಷತ್ತಿನಲ್ಲಿ ನೊಂದಣಿ ಮಾಡಿಸಿರುವ ಪ್ರಮಾಣಪತ್ರವನ್ನು ಹೊಂದಿರಬೇಕು.

ಕನಿಷ್ಟ 200 ಹಾಸಿಗೆಗಳ ಸಾಮರ್ಥ್ಯವುಳ್ಳ ಆಸ್ಪತ್ರೆಗಳಲ್ಲಿ 2 ವರ್ಷ ಕಾರ್ಯ ನಿರ್ವಹಿಸಿರುವ ಅನುಭವ ಹೊಂದಿರಬೇಕು. ಮತ್ತು ಅಲ್ಲಿ ತುರ್ತು ಚಿಕಿತ್ಸಾ ವಿಭಾಗ, ಪೋಸ್ಟ್ ಆಪರೇಟೀವ್ ವಾರ್ಡ್ ಹಾಗೂ ಆಪರೇಷನ್ ಥಿಯೇಟರ್‌ಗಳಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವವಿರಬೇಕು. ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಗಳ ಸೂಪರ್ ಸ್ಪೆಷಾಲಿಟಿ ವಿಭಾಗದಲ್ಲಿ 1 ವರ್ಷ ಕಾರ್ಯಾನುಭವ ಹೊಂದಿದವರಿಗೆ ವಿಶೇಷ ಆದ್ಯತೆ ನೀಡಲಾಗುವುದು.

2. **ವಯೋಮಿತಿ** : ಸಾಮಾನ್ಯ ಅಭ್ಯರ್ಥಿಗಳಿಗೆ ಕನಿಷ್ಟ 18 ವರ್ಷ ಗರಿಷ್ಟ 35 ವರ್ಷಗಳು.
ಇತರೇ ವರ್ಗದ ಅಭ್ಯರ್ಥಿಗಳಿಗೆ ಕನಿಷ್ಟ 18 ರಿಂದ ಗರಿಷ್ಟ 38 ವರ್ಷಗಳು.
ಎಸ್.ಸಿ/ಎಸ್.ಟಿ/ಪ್ರವರ್ಗ–Iಕ್ಕೆ ಕನಿಷ್ಟ 18 ರಿಂದ ಗರಿಷ್ಟ 40 ವರ್ಷಗಳು.

3. **ಅರ್ಜಿ ಸಲ್ಲಿಸುವ ವಿಧಾನ** : ಅರ್ಜಿಯನ್ನು ಪಿಎಂಎಸ್ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವೆಬ್‌ಸೈಟ್ **www.karunadu.gov.in/dmekarnataka or www.bmcalumini.com.** ಮುಖಾಂತರ ಡೌನ್‌ಲೋಡ ಮಾಡಿಕೊಂಡ ಅರ್ಜಿಯನ್ನು ಭರ್ತಿ ಮಾಡಿ ಅಂಚೆ ಮುಖಾಂತರ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು, ಹೆಚ್ಚಿನ ಮಾಹಿತಿಯನ್ನು ಸದರಿ ವೆಬ್‌ಸೈಟ್ ನೋಡುವುದು.

4. **ಅರ್ಜಿ ಸಲ್ಲಿಸುವ ವಿಳಾಸ:** ವಿಶೇಷಾಧಿಕಾರಿಗಳು, ಪಿಎಂಎಸ್ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಕೆ.ಆರ್.ರಸ್ತೆ ಬೆಂಗಳೂರು.

5. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ** : 20–01–2012 ಸಂಜೆ 5.30 ಘಂಟೆಯವರೆಗೆ

6. **ಅರ್ಜಿ ಶುಲ್ಕ:–**

ಸಾಮಾನ್ಯ ಹಾಗೂ ಇತರೇ ವರ್ಗಕ್ಕೆ – ರೂ. 300/–
ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಪ್ರವರ್ಗ–1 – ರೂ. 100/–

(ಅರ್ಜಿ ಶುಲ್ಕದ ಡಿ.ಡಿ ಯನ್ನು ವಿಶೇಷಾಧಿಕಾರಿಗಳು, ಪಿಎಂಎಸ್ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತೆ ಇವರ ಹೆಸರಿನಲ್ಲಿ ಸಲ್ಲಿಸುವುದು)

**ಸೂಚನೆ:** **ಅಪೂರ್ಣವಾದ ಅರ್ಜಿ ಹಾಗೂ ಡಿ.ಡಿ ಲಗತ್ತಿಸದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**
**ಅಗತ್ಯ ಸೇವಾ ಅನುಭವ ಇತ್ಯಾದಿ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್ ಮುಖಾಂತರ ಪಡೆಯುವುದು.**

**ವಿಶೇಷಾಧಿಕಾರಿಗಳು**
ಪಿಎಂಎಸ್ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,

GOVERNMENT OF KARNATAKA
# PMSSY SUPER SPECIALITY HOSPITAL
VICTORIA HOSPITAL CAMPUS, BANGALORE-02
(A RECOGNIZED INSTITUTE OF GOVT. OF KARNATAKA)
**Website: www.karunadu.gov.in/dmekarnataka or www.bmcalumini.com** Ph:0802670 5883,

No:PMSSY/SSH/ 28 /2011-12 Dated: 26/12/2011

**Application for filling up 200 posts of Staff Nurses**

Applications are invited from the eligible candidates from the Staff Recruitment Committee PMSSY Super Speciality Hospital for filling up of the 200 posts of Staff Nurses in the pay scale of Rs.8825-16000. The details are as here under.

1. **Minimum Qualification**:

**Staff Nurse:** PUC ( 10+2 or equivalent) and should possess B.Sc. Nursing Degree from the Institute reconigised by the Govt. of Karnataka and shall possess Karnataka Governing Council registration certificate and should have working experience in the hospitals having Super Speciality Departments.

**Or**

PUC (10+2 or equivalent) and GNM or Diploma in Nursing (3 ½ years) from an Institute recognised by the Govt. of Karnataka and should possess a Karnataka Nursing Council registration certificate.

Should have minimum 2 years working experience in hospitals with a minimum capacity of 200 beds and have working experience in the Emergency Department, Post Operative ward and operation theatre in such hospitals. Special preference will be given to those having one year working experience in the Super Speciality Departments of the hospitals attached to Medical College.

**2. Age Limit:** Min 18 years and Max 35 years for General Candidates.
Min 18 years and Max 38 years for others.
Min 18 years and Max 40 years for SC/ST/Cat-I Candidates.

**3. Address for submitting application**: Special Officer PMSSY Super Speciality Hospital, Victoria Hospital Campus, Fort, K.R.Road, Bangalore-560002

4. **Last date for submission of Application: 20-01-2012 till 5.30 PM.**

5. **Mode of submission of Applications**: Application should be downloaded from the Website: **www.karunadu.gov.in/dmekarnataka OR www.bmcalumini.com** and duly filled prescribed formats of application should be submitted along with one set of attested copies of all documents. For further details please see the above website.

**5. Application Fees**: General & Other Category: Rs.300/-
SC/ST/CAT-I : Rs.100/-

( DD towards application fees shall be submitted in the name of Special Officer, PMSSY Super Speciality Hospital Bangalore)
Note: Incomplete application and application without DD are liable to be rejected. Service experience and other details may be obtained through the website.

Sd/-
Special Officer
PMSSY Super Speciality Hospital

# ಕರ್ನಾಟಕ ಸರ್ಕಾರ

ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,
ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು-560 002
(ಕರ್ನಾಟಕ ಸರ್ಕಾರದ ಅಂಗೀಕೃತ ಸಂಸ್ಥೆ)
**Website: www.karunadu.gov.in/dmekarnataka or www.bmcalumini.com Ph:2670 5883**

ಸಂಖ್ಯೆ: ಪಿಎಂಎಸ್‌ಎಸ್‌ವೈ/ಎಸ್‌ಎಸ್‌ಹೆಚ್/28/2011-12 ದಿನಾಂಕ:26/12/2011.

## ನೇಮಕಾತಿ ಅಧಿಸೂಚನೆ

ಅರ್ಜಿಯನ್ನು ಭರ್ತಿ ಮಾಡುವುದಕ್ಕೆ ಮುಂಚೆ ಗಮನಿಸಬೇಕಾದ ಅಂಶಗಳು

ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಬೆಂಗಳೂರು ಇಲ್ಲಿ ಖಾಲಿ ಇರುವ ಕೆಳಕಂಡ ಹುದ್ದೆಗಳಿಗೆ 'ನೇರ ನೇಮಕಾತಿ' ಮೂಲಕ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ನೇಮಕಾತಿ ಅಧಿಸೂಚನೆ ಹೊರಡಿಸಿದೆ. ಈ ನೇಮಕಾತಿ ಅಧಿಸೂಚನೆಯಲ್ಲಿ ಅರ್ಜಿ ಸಲ್ಲಿಸಲು ಹೊರಡಿಸಿದ ದಿನಾಂಕವಾದ 31-12-2011 ಕ್ಕೆ ಅರ್ಹರಾಗಿರುವ ಅಭ್ಯರ್ಥಿಗಳಿಂದ ಸಂಸ್ಥೆಯು ನಿಗದಿಪಡಿಸಿರುವ ಅರ್ಜಿ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬೇರೆ ಯಾವುದೇ ನಮೂನೆಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸದೆ ತಿರಸ್ಕರಿಸಲಾಗುವುದು.

### 1) ನೇಮಕಾತಿ ಪ್ರಕಟಿಸಿರುವ ಹುದ್ದೆ:-

| ಕ್ರ. ಸಂ | ಹುದ್ದೆಗಳು | ವೇತನ ಶ್ರೇಣಿ (ರೂ.ಗಳಲ್ಲಿ) | ಹುದ್ದೆಗಳ ಸಂಖ್ಯೆ |
|---|---|---|---|
| 01. | ಶುಶ್ರೂಷಕರು (ಸ್ಟ್ಯಾಫ್ ನರ್ಸ್) | 8825-16000 | 200 |

### 2) ಆಯ್ಕೆಗೆ ಅರ್ಹತೆ:-

ನೇಮಕಾತಿ ಅಧಿಸೂಚನೆ ದಿನಾಂಕದಂದು ಸದರಿ ಹುದ್ದೆಗಳಿಗೆ ಅರ್ಹತೆ ಹೊಂದಿರಬೇಕು. ಸದರಿ ಅಭ್ಯರ್ಥಿಯು ನಿಗದಿಪಡಿಸಿರುವ ಅರ್ಹತೆಯನ್ನು ಹೊಂದದೆ ಇದ್ದಲ್ಲಿ ಆಯ್ಕೆಗೆ ಅರ್ಹತೆ ಪಡೆಯುವುದಿಲ್ಲ.

### 3) ಆಯ್ಕೆ ಮತ್ತು ನೇಮಕಾತಿ:-

ಅರ್ಹ ಅಭ್ಯರ್ಥಿಗಳನ್ನು ಸಿಬ್ಬಂದಿ ನೇಮಕಾತಿ ಸಮಿತಿ, ಪಿಎಂಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಇವರು ಈ ಕೆಳಗೆ ಹೇಳಿದಂತೆ ನೇರ ನೇಮಕಾತಿ ಮೂಲಕ 1:3 ಅನುಪಾತದಲ್ಲಿ ಪರಿಶೀಲಿಸಿ ಆಯ್ಕೆ ಮಾಡುವರು.

### 4) ವಿದ್ಯಾರ್ಹತೆ ಹಾಗೂ ಅನುಭವ:-

**ಶುಶ್ರೂಷಕರು:-**

ಅ. ಪಿ.ಯು.ಸಿ (10+2 ಅಥವಾ ಸಮಾನಾಂತರ) ಮತ್ತು ಕರ್ನಾಟಕ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಬಿ.ಎಸ್ಸಿ. ನರ್ಸಿಂಗ್ ಪದವಿ ಹೊಂದಿರತಕ್ಕುದು ಮತ್ತು ಕರ್ನಾಟಕ ಶುಶ್ರೂಷಕ ಪರಿಷತ್ತಿನಲ್ಲಿ ನೊಂದಣಿ ಮಾಡಿಸಿರುವ ಪ್ರಮಾಣಪತ್ರವನ್ನು ಹೊಂದಿರತಕ್ಕುದು ಹಾಗೂ ಸೂಪರ್ ಸ್ಪೆಷಾಲಿಟಿ ವಿಭಾಗಗಳಲ್ಲಿರುವ ಆಸ್ಪತ್ರೆಗಳಲ್ಲಿ 1 ವರ್ಷ ಕಾರ್ಯಾನುಭವ ಹೊಂದಿರತಕ್ಕುದು.

ಅಥವಾ

ಆ. ಪಿ.ಯು.ಸಿ (10+2 ಅಥವಾ ಸಮಾನಾಂತರ) ಮತ್ತು ಜಿಎನ್‌ಎಂ ಅಥವಾ ಡಿಪ್ಲೋಮಾ ಇನ್ ನರ್ಸಿಂಗ್ (3½ ವರ್ಷ) ಕರ್ನಾಟಕ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಾಗಿರಬೇಕು

ಹಾಗೂ ಕರ್ನಾಟಕ ಶುಶ್ರೂಷಕ ಪರಿಷತ್ತಿನಲ್ಲಿ ನೋಂದಣಿ ಮಾಡಿಸಿರುವ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

ಆ. ಕನಿಷ್ಟ 200 ಹಾಸಿಗೆಗಳ ಸಾಮರ್ಥ್ಯವುಳ್ಳ ಆಸ್ಪತ್ರೆಗಳಲ್ಲಿ 2 ವರ್ಷ ಕಾರ್ಯ ನಿರ್ವಹಿಸಿರುವ ಅನುಭವ ಹೊಂದಿರಬೇಕು. ತುರ್ತು ಚಿಕಿತ್ಸಾ ವಿಭಾಗ, ಪೋಸ್ಟ್ ಆಪರೇಟೀವ್ ವಾರ್ಡ್ ಹಾಗೂ ಆಪರೇಷನ್ ಥಿಯೇಟರ್ ಗಳಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವವಿರಬೇಕು. ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಗಳ ಸೂಪರ್ ಸ್ಪೆಷಾಲಿಟಿ ವಿಭಾಗದಲ್ಲಿ 1 ವರ್ಷ ಕಾರ್ಯಾನುಭವ ಹೊಂದಿದವರಿಗೆ ವಿಶೇಷ ಆದ್ಯತೆ ನೀಡಲಾಗುವುದು.

**5) <u>ಮೀಸಲಾತಿ ಅವಕಾಶಗಳು</u> :**

ರಾಜ್ಯ ಸರ್ಕಾರದ ನಿಯಮಗಳಿಗೆ ಅನುಸಾರವಾಗಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸಹಿಮ 95 ದಿನಾಂಕ: 20-06-1995 ಮತ್ತು ನಂತರ ಜಾರಿಯಲ್ಲಿರುವ ಮೀಸಲಾತಿ ನಿಯಮಗಳ ಪ್ರಕಾರ ನೇಮಕಾತಿ ಪ್ರಾಧಿಕಾರದ ಹಂತದಲ್ಲಿ ಲಭ್ಯವಿರುವ ರಿಕ್ತ ಸ್ಥಾನಗಳನ್ನು ನಿಯಮಾನುಸಾರ ಮೀಸಲಿರಿಸಲಾಗಿದೆ.

ಪ್ರವರ್ಗ-1, 2ಎ, 2ಬಿ, 3ಎ, ಹಾಗೂ 3ಬಿ ಈ ಪ್ರವರ್ಗಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅದೇ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಈ ಸ್ಥಾನಗಳನ್ನು ಸಾಮಾನ್ಯ ಅಭ್ಯರ್ಥಿಗಳಿಂದ ತುಂಬಲಾಗುವುದು. ಆದರೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಭರ್ತಿಮಾಡದೆ ಬ್ಯಾಕ್ ಲಾಗ್ ಹುದ್ದೆಗಳೆಂದು ಪರಿಗಣಿಸಲಾಗುವುದು.

ಮೀಸಲಾತಿಗೆ ಸಂಬಂಧಿಸಿದಂತೆ ಮೆರಿಟ್ ಪಟ್ಟಿಯನ್ನು ತಯಾರಿಸುವ ಸಂದರ್ಭದಲ್ಲಿ ಇರಬಹುದಾದ ಸರ್ಕಾರದ ಆದೇಶಗಳಂತೆ ಕ್ರಮ ವಹಿಸಲಾಗುವುದು.

ಮೇಲೆ ವಿವರಿಸಿದ ಸಾಮಾನ್ಯ ಅರ್ಹತೆ ಸೇರಿದಂತೆ ಪ್ರತಿ ಮೀಸಲಾತಿ ಪ್ರವರ್ಗಗಳಿಗೆ ಈ ಕೆಳಕಂಡ ಆದೇಶಗಳ ಪ್ರಕಾರ **ಸಮತಳ ಮೀಸಲಾತಿ** ಅನ್ವಯ (**Horizontal reservation**) ಹುದ್ದೆಗಳನ್ನು ವರ್ಗೀಕರಿಸಲಾಗಿದೆ.

| | | | |
|---|---|---|---|
| 1 | ಮಾಜಿ ಸೈನಿಕ ಅಭ್ಯರ್ಥಿ ಗಳಿಗೆ | ಶೇಕಡ 10 | ಕರ್ನಾಟಕ ಸಿವಿಲ್ ಸರ್ವೀಸಸ್ (ಜನರಲ್ ರೆಕ್ರೂಟ್‌ಮೆಂಟ್) ರೂಲ್ಸ್ 1977ರ ನಿಯಮ 9(1)ರ ಅನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ: 22-11-2002 ಮತ್ತು ಸಿಆಸುಇ53/ಸೇನೆನಿ2007 ದಿ:04/01/2008 |
| 2 | ಅಂಗವಿಕಲ ಅಭ್ಯರ್ಥಿ ಗಳಿಗೆ | ಶೇಕಡ. 5(ಸಿ& ಡಿ ವೃಂದದವರಿಗೆ) ಶೇಕಡ.3(ಎ & ಬಿ ವೃಂದದವರಿಗೆ) | ಕರ್ನಾಟಕ ಸಿವಿಲ್ ಸರ್ವೀಸಸ್ (ಜನರಲ್ ರೆಕ್ರೂಟ್‌ಮೆಂಟ್) ರೂಲ್ಸ್ 1977ರ ನಿಯಮ 9(1)(ಎ)ರ ಅನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ: 22-11-2002ಮತ್ತು ಸಿಆಸುಇ53/ಸೇನೆನಿ2007 ದಿ:04/01/2008 |
| 3 | ಮಹಿಳಾ ಅಭ್ಯರ್ಥಿ ಗಳಿಗೆ | ಶೇಕಡ 30 | ಕರ್ನಾಟಕ ಸಿವಿಲ್ ಸರ್ವೀಸಸ್ (ಜನರಲ್ ರೆಕ್ರೂಟ್‌ಮೆಂಟ್) ರೂಲ್ಸ್ 1977ರ ನಿಯಮ 9(1)(ಬಿ) ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ: 22-11-2002 ಮತ್ತು ಸಿಆಸುಇ53/ಸೇನೆನಿ2007 ದಿ:04/01/2008 |
| 4 | ಯೋಜನೆ ಗಳಿಂದ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳಿಗೆ | ಶೇಕಡ 5 | ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 23 ಎಸ್‌ಆರ್‌ಆರ್ 99 ದಿನಾಂಕ: 23-11-2000 ಮತ್ತು ಸರ್ಕಾರದ ಆದೇಶದ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ:22-11-2002ಮತ್ತು ಸಿಆಸುಇ53/ಸೇನೆನಿ2007 ದಿ:04/01/2008 |
| 5 | ಗ್ರಾಮೀಣ ಅಭ್ಯರ್ಥಿ ಗಳಿಗೆ | ಶೇಕಡ 25 | 2000ದ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆ ಗಳಲ್ಲಿ ನೇಮಕಾತಿ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ) ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿ: 22-11-2002ಮತ್ತು ಸಿಆಸುಇ53/ಸೇನೆನಿ2007 ದಿ:04/01/2008 |
| 6 | ಕನ್ನಡ ಮಾಧ್ಯಮ ಅಭ್ಯರ್ಥಿ ಗಳಿಗೆ | ಶೇಕಡ 5 | ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 71 ಎಸ್‌ಆರ್‌ಆರ್ 2001 ದಿನಾಂಕ:24-10-2002 ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ: 22-11-2002ಮತ್ತು ಸಿಆಸುಇ53/ಸೇನೆನಿ2007 ದಿ:04/01/2008 |

ಅ) ಮಹಿಳಾ ಅಭ್ಯರ್ಥಿಗಳಿಗಾಗಿ ಮೀಸಲಿರಿಸಿರುವ ರಿಕ್ತ ಸ್ಥಾನಗಳಿಗೆ ಅರ್ಹ ಮಹಿಳಾ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಆ) ಮಾಜಿ ಸೈನಿಕರಿಗೆ /ಯೋಜನಾ ನಿರಾಶ್ರಿತ /ಗ್ರಾಮೀಣ ಪ್ರದೇಶದ /ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಇ) ಅಂಗ ವಿಕಲ ಅಭ್ಯರ್ಥಿಗಳು ಹುದ್ದೆಗೆ ನಿಗದಿಪಡಿಸಿದ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಲು ದೈಹಿಕವಾಗಿ ಸಮರ್ಥರೇ? ಎಂಬುದನ್ನು ನೇಮಕಾತಿ ಸಮಿತಿ ಪರಿಶೀಲಿಸಿದ ನಂತರವೇ ಅಭ್ಯರ್ಥಿಗಳ ಆಯ್ಕೆಗಳನ್ನು ಪರಿಗಣಿಸಲಾಗುವುದು.

**6) ಹುದ್ದೆಗಳ ವರ್ಗೀಕರಣ :**

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸಹಿಮ 95 ದಿನಾಂಕ: 20-06-95 ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೇನಿ.2002 ದಿನಾಂಕ: 22-11-2002 ಮತ್ತು ಸಿಆಸುಇ53/ಸೇನೆನಿ2007 ದಿ:04/01/2008 ಪ್ರಕಾರ ನೇಮಕಾತಿ ಪ್ರಾಧಿಕಾರದ ಹಂತದಲ್ಲಿ ಲಭ್ಯವಿರುವ ವಿಷಯವಾರು ರಿಕ್ತಸ್ಥಾನಗಳ ವಿವರಗಳನ್ನು **ಈ ಕೆಳಗಿನಂತೆ ವರ್ಗೀಕರಿಸಿ ನೀಡಿದೆ.**

| ಮೀಸಲಾತಿ | ಇತರೇ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
|---|---|---|---|---|---|---|---|---|
| ಪ.ಜಾ | 06 | 10 | 08 | 02 | 02 | 02 | - | 30 |
| ಪ.ಪಂ | 02 | 02 | 02 | - | - | - | - | 06 |
| ಪ್ರ.ವರ್ಗ-1 | 02 | 02 | 02 | - | - | 02 | - | 08 |
| ಪ್ರ.ವರ್ಗ-2(ಎ) | 06 | 10 | 08 | 02 | 02 | 02 | - | 30 |
| ಪ್ರ.ವರ್ಗ-2(ಬಿ) | 02 | 02 | 02 | - | - | 02 | - | 08 |
| ಪ್ರ.ವರ್ಗ-3(ಎ) | 02 | 02 | 02 | - | - | 02 | - | 08 |
| ಪ್ರ.ವರ್ಗ-3(ಬಿ) | 02 | 04 | 02 | - | - | 02 | - | 10 |
| ಸಾ.ಅ | 20 | 30 | 26 | 10 | 04 | 06 | 04 | 100 |
| ಒಟ್ಟು: | 42 | 62 | 52 | 14 | 08 | 18 | 04 | 200 |

**7) ನಿಗದಿತ ಅರ್ಜಿ ನಮೂನೆ ದೊರೆಯುವ ಸ್ಥಳ :-**

ನಿಗದಿತ ಅರ್ಜಿ ನಮೂನೆಯನ್ನು ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ವೆಬ್‌ಸೈಟ್ www.karunadu.gov.in/dmekarnataka or www.bmcalumini.com, ನಲ್ಲಿ ಪ್ರಕಟಿಸಲಾಗಿದೆ.

❖ **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20-01-2012 ಸಂಜೆ 5.30 ರವರೆಗೆ ಮಾತ್ರ.**

**8) ಅರ್ಜಿ ಶುಲ್ಕ:-**

ಸಾಮಾನ್ಯ ಹಾಗೂ ಇತರೇ ವರ್ಗಕ್ಕೆ – ರೂ. 300/-
ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಪ್ರವರ್ಗ-1 – ರೂ. 100/-

ಯಾವುದೇ ರಾಷ್ಟ್ರೀಕೃತ ಬ್ಯಾಂಕನಿಂದ ಪಡೆದ ಡಿ.ಡಿ ಯನ್ನು **ವಿಶೇಷಾಧಿಕಾರಿಗಳು, ಪಿಎಂಎಸ್‌ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,** ಇವರ ಹೆಸರಿನಲ್ಲಿ ಸಂದಾಯವಾಗುವಂತೆ ತೆಗೆದುಕೊಳ್ಳುವುದು.

**9) ಅರ್ಜಿ ನಮೂನೆಯ ವಿವರಗಳು ಮತ್ತು ಅರ್ಜಿ ಸಲ್ಲಿಸುವ ವಿಧಾನ :-**

- ಮೂಲ ಅರ್ಜಿಯಲ್ಲಿರುವ ಮಾಹಿತಿಗಳ ಬಗ್ಗೆ ಯಾವುದೇ ಹಂತದಲ್ಲೂ ಬದಲಾವಣೆಗೆ ಅವಕಾಶವಿರುವುದಿಲ್ಲ.
- ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಗಳನ್ನೇ ಆಧಾರವಾಗಿಟ್ಟುಕೊಂಡು ಆಯ್ಕೆ ಮಾಡಲಾಗುತ್ತದೆ. ಆದ್ದರಿಂದ ಯಾವುದೇ ಹಂತದಲ್ಲಿ ಅಪೂರ್ಣ, ಅಸ್ಪಷ್ಟ ತಪ್ಪು ಮಾಹಿತಿಗೆ ಅಭ್ಯರ್ಥಿಗಳೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಯಾವುದೇ ಹಂತದಲ್ಲಿಯೂ ಬದಲಾವಣೆಗೆ ಅಭ್ಯರ್ಥಿಗಳ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

• ಮೀಸಲಾತಿ ಆಯ್ಕೆ ಬಯಸುವ ಅಭ್ಯರ್ಥಿಗಳು ಮೂಲ ಅರ್ಜಿಯಲ್ಲಿ ಸಂಬಂಧಪಟ್ಟ ಪ್ರವರ್ಗವನ್ನು ಕಡ್ಡಾಯವಾಗಿ ನಮೂದಿಸಬೇಕು. ಆ ಅಂಕಣವನ್ನು ತುಂಬದೇ ಖಾಲಿ ಬಿಟ್ಟಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

• ಯಾವುದೇ ಹಂತದಲ್ಲಿ ಪ್ರವರ್ಗವನ್ನು ಹೊಸದಾಗಿ ಸೇರ್ಪಡೆ ಮಾಡಲು ಅಥವಾ ಬದಲಾವಣೆ ಮಾಡಲು ಅವಕಾಶವಿಲ್ಲ.

• ಮೀಸಲಾತಿ ಅಥವಾ ಇತರೆ ಯಾವುದೇ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಪ್ರಮಾಣ ಪತ್ರಗಳ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು ಹಾಗೂ ಅವುಗಳ ವಿವರವನ್ನು ಅರ್ಜಿಯಲ್ಲಿ ನೀಡಿರುವ ಸಂಬಂಧಿಸಿದ ಅಂಕಣಗಳಲ್ಲಿ ತಪ್ಪದೇ ನಮೂದಿಸಬೇಕು. ಒಂದು ವೇಳೆ ಅರ್ಜಿ ನಮೂನೆಯಲ್ಲಿ ವಿವರಗಳನ್ನು ನಮೂದಿಸದೇ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿದ್ದರೂ, ಮೀಸಲಾತಿ ಕೋರುವ ಇತರ ಸೌಲಭ್ಯಗಳಿಗೆ ಪರಿಗಣಿಸಲಾಗುವುದಿಲ್ಲ.

• ಅಂಚೆ ಮೂಲಕ ಮಾತ್ರ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಹಾಗೂ ನಿಗಧಿ ಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಕೆಯಾಗುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

• ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸಿರುವ ವಿವರಗಳಿಗೆ ಸಂಬಂಧಪಟ್ಟಂತೆ ಅಂದರೆ, ಜನ್ಮ ದಿನಾಂಕ, ಪದವಿ ಪರೀಕ್ಷೆಯ ಅಂಕಪಟ್ಟಿಗಳು ಮತ್ತು ತೇರ್ಗಡೆ ಹೊಂದಿದ ಪ್ರಮಾಣ ಪತ್ರಗಳು ಹಾಗೂ ಕೋರುತ್ತಿರುವ ಮೀಸಲಾತಿ ಗುಂಪು (ನೇರ ಮತ್ತು ಸಮತಲ), ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಅರ್ಜಿಯ ಪ್ರತಿಗಳೊಂದಿಗೆ ಲಗತ್ತಿಸಬೇಕು. ಮೂಲ ಪ್ರಮಾಣ ಪತ್ರಗಳನ್ನು ಆಯ್ಕೆಯಾದ ಅಭ್ಯರ್ಥಿಯು ಪರಿಶೀಲನೆಗೆ ಒಳಪಡಿಸಬೇಕು.

• ಹಾಲಿ ರಾಜ್ಯ ಸರ್ಕಾರ/ಕೇಂದ್ರಸರ್ಕಾರ/ಅನುಧಾನಿತ ಸಂಸ್ಥೆಗಳಲ್ಲಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಹುದ್ದೆಯ ನೇಮಕಾತಿ ಪ್ರಾಧಿಕಾರಿಯಿಂದ ಅನುಮತಿ ಪಡೆದು ಅರ್ಜಿ ಸಲ್ಲಿಸತಕ್ಕದ್ದು

• ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವಜನಿಕ ರಜಾ ಎಂದು ಘೋಷಿಸಲ್ಪಟ್ಟರೆ, ನಂತರದ ಕೆಲಸದ ದಿನವು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿರುತ್ತದೆ.

• ಅರ್ಜಿಯನ್ನು ಒಳಗೊಂಡ ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತಿದೆ. ಎಂಬುದನ್ನು ಸ್ಪಷ್ಟವಾಗಿ ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು.

## 10. <u>ಅರ್ಜಿಯೊಂದಿಗೆ ಸಲ್ಲಿಸಬೇಕಾದ ಲಗತ್ತು ದಾಖಲೆಗಳು :</u>

1. ಎಸ್.ಎಸ್.ಎಲ್.ಸಿ. ಅಂಕಪಟ್ಟಿ (ಒಂದಕ್ಕಿಂತ ಹೆಚ್ಚಿನ ಪ್ರಯತ್ನಗಳಲ್ಲಿ ಉತ್ತೀರ್ಣರಾದವರು ಜನ್ಮ ದಿನಾಂಕ ಹೊಂದಿರುವ ಕ್ರೋಢಿಕೃತ ಅಂಕಪಟ್ಟಿ)
2. ಪಿ.ಯು.ಸಿ ಅಂಕಪಟ್ಟಿ (ಪಿ.ಯು.ಸಿ.ಯಲ್ಲಿ ಅಧ್ಯಯನ ಮಾಡಿದ ಮಾಧ್ಯಮದ ಪ್ರಮಾಣ ಪತ್ರ)
3. ಮೀಸಲಾತಿ ಕೋರಿರುವ ಪ್ರವರ್ಗದ ಪ್ರಮಾಣ ಪತ್ರ
4. ಮಾಜಿ ಸೈನಿಕರಾಗಿ ಕಾರ್ಯನಿರ್ವಹಿಸಿರುವ/ಅವಲಂಬಿತರ ಪ್ರಮಾಣ ಪತ್ರ
5. ಗ್ರಾಮೀಣ ಅಭ್ಯರ್ಥಿ ವ್ಯಾಸಂಗ ಹಾಗೂ ಸಿಂಧುತ್ವದ(ಮಾದರಿಯನ್ನು ಅನುಬಂಧದಲ್ಲಿ ನೀಡಿದೆ) ಪ್ರಮಾಣ ಪತ್ರಗಳು (ದಿ. 10-08-2005 ರ ಸರಕಾರದ ಆದೇಶದಲ್ಲಿ ನಿಗದಿಪಡಿಸಿರುವ ನಮೂನೆ 1 ಮತ್ತು 2 ರಲ್ಲಿ)
6. ಅಂಗವಿಕಲ ಅಭ್ಯರ್ಥಿ ಪ್ರಮಾಣ ಪತ್ರ
7. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗಮಾಡಿದ ಪ್ರಮಾಣ ಪತ್ರ
8. ಯೋಜನೆಗಳಿಂದ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿ ಪ್ರಮಾಣ ಪತ್ರ
9. ಸಂಬಂಧಪಟ್ಟ ವಿದ್ಯಾರ್ಹತೆ ಅಂಕಪಟ್ಟಿ.
10. ಹಾಲಿ ಕಾರ್ಯ ನಿರ್ವಹಿಸುತ್ತಿರುವ ಉದ್ಯೋಗಕ್ಕೆ ಸಂಬಂಧಿಸಿದ ಸೇವಾ ಪ್ರಮಾಣ ಪತ್ರ ಹಾಗೂ ಈ ಹುದ್ದೆಗೆ ಅರ್ಜಿ ಸಲ್ಲಿಸಲು ನೇಮಕಾತಿ ಪ್ರಾಧಿಕಾರದಿಂದ ಪಡೆದುಕೊಂಡಿರವ ಅನುಮತಿ ಪತ್ರ.
11. ಇನ್ನಿತರ ಅವಶ್ಯವೆಂದು ಭಾವಿಸಿದ ದಾಖಲೆಗಳ ಪ್ರತಿಗಳು.

<u>**ಸೂಚನೆ:**</u> ಮೇಲ್ಕಂಡ ಎಲ್ಲಾ ದಾಖಲೆಗಳನ್ನು ಅರ್ಜಿ ಸಲ್ಲಿಸುವಾಗಲೇ ಪಡೆದು ಲಗತ್ತಿಸಿರಬೇಕು. ಯಾವುದೇ ಹೊಸ ದಾಖಲೆಗಳನ್ನು ನಂತರ ಸಲ್ಲಿಸಲು ಅಥವಾ ಸೇರಿಸಲು ಅವಕಾಶವಿರುವುದಿಲ್ಲ. ಅಂತಹ ದಾಖಲೆಗಳನ್ನು ಪರಿಗಣಿಸದೇ ತಿರಸ್ಕರಿಸಲಾಗುವುದು.

**11) <u>ವಯೋಮಿತಿ:</u>–** ಅಭ್ಯರ್ಥಿಗಳು ದಿನಾಂಕ: 31-12-2011ಕ್ಕೆ ಕೆಳಗೆ ನಿಗಧಿಪಡಿಸಿದ ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯೊಳಗಿರಬೇಕು.

**<u>ಕನಿಷ್ಠ:</u> 18 ವರ್ಷಗಳು** ತುಂಬಿರಬೇಕು.

**<u>ಗರಿಷ್ಠ:</u>**

| | |
|---|---|
| ಪ.ಜಾತಿ, ಪ.ವರ್ಗ, ಹಿಂ.ವರ್ಗಗಳ ಪ್ರವರ್ಗ–1ಕ್ಕೆ | 40 ವರ್ಷ ಮೀರಿರಬಾರದು. |
| ಹಿಂದುಳಿದ ವರ್ಗಗಳ 2ಎ, 2ಬಿ, 3ಎ, 3ಬಿ ಗಳಿಗೆ | 38 ವರ್ಷ ಮೀರಿರಬಾರದು. |
| ಸಾಮಾನ್ಯ ವರ್ಗದವರಿಗೆ | 35 ವರ್ಷ ಮೀರಿರಬಾರದು. |

- ಮಾಜಿ ಸೈನಿಕರು 1977ರ ಕರ್ನಾಟಕ ರಾಜ್ಯ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳ ಪ್ರಕಾರ ವಯೋಮಿತಿ ಸಡಿಲಿಕೆಗೆ ಅರ್ಹರಿರುತ್ತಾರೆ .

**12) <u>ವಯೋಮಿತಿ ಸಡಿಲಿಕೆ:</u>**

ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಆಡಳಿತ ಮಂಡಳಿಯ ಅನುಮೋದನೆಗೆ ಒಳಪಟ್ಟು ಅಭ್ಯರ್ಥಿಯು ಈಗಾಗಲೇ ರಾಜ್ಯ ಸರ್ಕಾರ/ ಕೇಂದ್ರ ಸರ್ಕಾರ/ ಸರ್ಕಾರದ ಯಾವುದೇ ಪ್ರಾಧಿಕಾರದಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಾರ್ವಜನಿಕ ಸ್ವಾಮ್ಯದ ಕಂಪನಿಗಳಲ್ಲಿ [ಪ್ರಸ್ತುತ ಉದ್ಯೋಗಿಯಾಗಿದ್ದಲ್ಲಿ ಅಂಥಹವರು ಇಲಾಖಾ ವತಿಯಿಂದ ಕರ್ತವ್ಯದಿಂದ ಬಿಡುಗಡೆ ಮಾಡುವ] ಅವನು/ಅವಳು ಇಷ್ಟು ವರ್ಷಗಳ ಹುದ್ದೆಯಲ್ಲಿ ಸೇವೆ ಸಲ್ಲಿಸಿರುವರೋ ಅಷ್ಟು ವರ್ಷಗಳು ಅಥವಾ 5 ವರ್ಷ ಅವಧಿ ಅದರಲ್ಲಿ ಯಾವುದು ಕಡಿಮೆ ಅಷ್ಟು ವರ್ಷಗಳು (ಸೋಸೈಟಿ ಆ್ಯಕ್ಟ್ 1960 ಮತ್ತು ಕೆಸಿಎಸ್ (ಜನರಲ್ ರಿಕ್ರುಟಮೆಂಟ್) ನಿಯಮಗಳು 1977 ಪಾಲಿಸಲಾಗುವುದು.

**13) <u>ಮೀಸಲಾತಿ ಸೌಲಭ್ಯ ಪಡೆಯಲು ಅಭ್ಯರ್ಥಿಗಳು ಸಲ್ಲಿಸಬೇಕಾದ ಪ್ರಮಾಣ ಪತ್ರಗಳು:</u>**

ಅ) **ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳು** ಸರ್ಕಾರದ ಅಧಿಸೂಚನೆ ಸಂಖ್ಯೆ: ಎಸ್‌ಡಬ್ಲೂಡಿ 132 ಎಸ್‌ಎಡಿ 97 ದಿನಾಂಕ: 08-02-2000 ಮತ್ತು ಹಿಂದುಳಿದ ಪ್ರವರ್ಗಗಳಾದ ಪ್ರವರ್ಗ –2ಎ, 2ಬಿ, 3ಎ, ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳು ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 126 ಬಿಸಿಎ ದಿನಾಂಕ: 13-02-2003 ರಂದು ಹೊರಡಿಸಿದ "**ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು, ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದ ಮೀಸಲಾತಿ) (ತಿದ್ದುಪಡಿ) ನಿಯಮಗಳು 2000**" ರನ್ವಯ ನಿಗದಿಪಡಿಸಿರುವ ಅಭ್ಯರ್ಥಿಗಳಿಗೆ ಅನ್ವಯಿಸುವ ಕೆಳಕಂಡ ನಮೂನೆಗಳಲ್ಲಿಯೇ ಸಂಬಂಧಿಸಿದ ವ್ಯಾಪ್ತಿಯ ತಹಸೀಲ್ದಾರರ ದರ್ಜೆಗಿಂತ ಕಡಿಮೆ ಇಲ್ಲದ ರೆವಿನ್ಯೂ ಪ್ರಾಧಿಕಾರಿಯಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು.

| | | |
|---|---|---|
| 1 | ಅನುಸೂಚಿತ ಜಾತಿ ಅಥವಾ ಅನು ಸೂಚಿತ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು | **<u>ನಮೂನೆ –ಡಿ.</u>** ನಿಯಮ3ಎ(2)(3). ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 132 ಎಸ್‌ಎಡಿ 97 ದಿನಾಂಕ: 08-02-2000 ಅಥವಾ ಇತ್ತೀಚಿನ ಸರ್ಕಾರಿ ಆದೇಶದಂತೆ |
| 2 | ಹಿಂದುಳಿದ ಪ್ರವರ್ಗ 1ಕ್ಕೆ ಸೇರಿದ ಅಭ್ಯರ್ಥಿಗಳು | **<u>ನಮೂನೆ –ಇ</u>** ನಿಯಮ3ಎ(2)(3). ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 132 ಎಸ್‌ಎಡಿ 97 ದಿನಾಂಕ: 08-02-2000 ಅಥವಾ ಇತ್ತೀಚಿನ ಸರ್ಕಾರಿ ಆದೇಶದಂತೆ |
| 3 | ಹಿಂದುಳಿದ ಪ್ರವರ್ಗ2ಎ, 2ಬಿ, 3ಎ, ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳು | **<u>ನಮೂನೆ –ಎಫ್</u>** ನಿಯಮ3ಎ(2)(3). ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 126 ಬಿಸಿಎ ದಿನಾಂಕ: 13-02-2003 ಅಥವಾ ಇತ್ತೀಚಿನ ಸರ್ಕಾರಿ ಆದೇಶದಂತೆ |

<u>ಮೇಲ್ಕಂಡ ಮೀಸಲಾತಿ ಪ್ರಮಾಣ ಪತ್ರಗಳು ಉಲ್ಲೇಖಿಸಿರುವ ನಿಯಮಗಳ ಪ್ರಕಾರ ಚಾಲ್ತಿಯಲ್ಲಿರಬೇಕು. ಚಾಲ್ತಿಯಲ್ಲಿರದ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.</u>

**ಆ) ಗ್ರಾಮೀಣ ಅಭ್ಯರ್ಥಿಗಳು:**

ಗ್ರಾಮೀಣ ಅಭ್ಯರ್ಥಿ ಎಂದರೆ ಕರ್ನಾಟಕ ಪೌರ ನಿಯಮಗಳ ಅಧಿನಿಯಮ 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964 ರಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶ ಹೊರತಾಗಿ ಇತರೆ ಯಾವುದೇ ಪ್ರದೇಶದಲ್ಲಿರುವ ಶಾಲೆಯಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಅಭ್ಯರ್ಥಿ.

ಗ್ರಾಮೀಣ ಅಭ್ಯರ್ಥಿಗಳ ಮೀಸಲಾತಿ ಅಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಮಾಣ ಪತ್ರಗಳನ್ನ **ಸರಕಾರಿ ಆದೇಶ ಸಂಖ್ಯೆ: ಡಿಪಿಎಆರ್ 96 ಸೇನೆನಿ 2005 ದಿನಾಂಕ 10-08-2005** ರಲ್ಲಿ ನೀಡಿದ ನಿಗದಿತ ನಮೂನೆಯಲ್ಲಿ ಮಾತ್ರ ಸಲ್ಲಿಸಬೇಕು.

<u>ಗ್ರಾಮೀಣ ಗುಂಪಿನಲ್ಲಿ ಮೀಸಲಾತಿ ಬಯಸುವ ಅಭ್ಯರ್ಥಿಗಳಿಗೆ ಸೂಚನೆಗಳು:-</u>

ಗ್ರಾಮೀಣ ಅಭ್ಯರ್ಥಿ ಎಂದರೆ ಕರ್ನಾಟಕ ಪೌರನಿಗಮಗಳ ಅಧಿನಿಯಮ 1976 ಅಥವಾ ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರಡಿಯಲ್ಲಿ ನಿರ್ದಷ್ಟ ಪಡಿಸಿದ ಒಂದು ದೊಡ್ಡ ನಗರ ಪ್ರದೇಶ ಒಂದು ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನಾ ಹಂತದಲ್ಲಿರುವ ಪ್ರದೇಶಗಳ (ಮಹಾನಗರ ಪಾಲಿಕೆ /ನಗರಸಭೆ/ ಪುರಸಭೆ/ಪಟ್ಟಣಪಂಚಾಯತಿ/ಸಣ್ಣ ಪಟ್ಟಣಗಳಿಂದ) ಹೊರತಾದ ಪ್ರದೇಶವಾಗಿರುತ್ತದೆ ಅಂದರೆ ಕೇವಲ ಗ್ರಾಮ ಪಂಚಾಯತ /ಮಂಡಲ ಪಂಚಾಯತ್ ವ್ಯಾಪ್ತಿಗೆ ಒಳಪಡುವ ಶಾಲೆಯಲ್ಲಿ ಒಂದನೇ ತರಗತಿಯಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಮಾತ್ರ ಗ್ರಾಮೀಣ ಮೀಸಲಾತಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

ಸದರಿ ಅಧಿನಿಯಮದಲ್ಲಿ ಗ್ರಾಮೀಣ ಅಭ್ಯರ್ಥಿಯನ್ನು ಈ ಕೆಳಗೆ ಉದ್ಧರಿಸಿದಂತೆ ಪರಿಭಾಷಿಸಲಾಗಿದೆ.

1) ಗ್ರಾಮೀಣ ಅಭ್ಯರ್ಥಿಯಂದರೆ ಒಂದು ಹುದ್ದೆಗಾಗಿ ನಿಗದಿಪಡಿಸಿರುವ ಅರ್ಹತಾ ಪರಿಕ್ಷೆಯ ಎಸ್.ಎಸ್.ಎಲ್.ಸಿ ಅಥವಾ ಉನ್ನತ ಪರೀಕ್ಷೆಯಾಗಿದ್ದಲ್ಲಿ 1 ನೆ ತರಗತಿಯಿಂದ 10 ನೇ ತರಗತಿಯವರೆಗೆ

2) ಒಂದು ಹುದ್ದೆಗೆ ನಿಗದಿಪಡಿಸಲಾದ ಅರ್ಹತಾ ಪರೀಕ್ಷೆಯು ಎಸ್.ಎಸ್.ಎಲ್.ಸಿ ಗಿಂತ ಕಡಿಮೆಯಾಗಿದ್ದಲ್ಲಿ 1 ನೇ ತರಗತಿಯಿಂದ ಅರ್ಹತಾ ಪರೀಕ್ಷೆಯವರೆಗೆ

3) ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ 1 ರಲ್ಲಿ ಅಂದರೆ ಮೇಲುಸ್ಥರದಲ್ಲಿ (ಕ್ರೀಮಿಲೇಯರ್) ಬರುವುದಿಲ್ಲವೆಂದು ಸಂಬಂದಿಸಿದ ತಹಸೀಲ್ದಾರರಿಂದ ಪಡೆದ ಪ್ರಮಾಣ ಪತ್ರ ದ ಜೊತೆಗೆ ಸರಕಾರದ ಆದೇಶ ದಿನಾಂಕ 10-8-2005 ರಲ್ಲಿ ನಿಗದಿಪಡಿಸಲಾದ ನಮೂನ 2 ರಲ್ಲಿ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

4) ಪ್ರವರ್ಗ-1 ,2ಎ,2ಬಿ, 3ಎ, 3ಬಿ, ಪ.ಜಾ, ಪ,ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ತಮ್ಮ ಮೀಸಲಾತಿ ಪ್ರಮಾಣ ಪತ್ರದ ಜೊತೆಗೆ ಸರಕಾರದ ಆದೇಶ ದಿನಾಂಕ: 10-8-2005 ರಲ್ಲಿ ನಿಗದಿಪಡಿಸಲಾದ ನಮೂನೆ 2 ರಲ್ಲಿ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ಇ) ಅಂಗವಿಕಲ ಅಭ್ಯರ್ಥಿಗಳು:

ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 52 ಎಸ್ಆರ್ಆರ್ 99 ದಿನಾಂಕ; 29-11-2002 ಮತ್ತು ಡಿಪಿಎಆರ್ 50 ಎಸ್ಆರ್ಆರ್2000ದಿನಾಂಕ 03-09-2005 ರಲ್ಲಿ ನಿಗದಿಪಡಿಸಿರುವ ಅಂಗವಿಕಲ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು. ಸರ್ಕಾರಿ ಆದೇಶ ಸಂಖ್ಯೆ: ಎಂಎಂಇ107/ ಪಿಹೆಚ್ಪಿ/ 2003 ದಿನಾಂಕ 11/07/2003 ರಲ್ಲಿ ವೈದ್ಯಕೀಯ ಪ್ರಮಾಣ ಪತ್ರವನ್ನು ಸಕ್ಷಮ ವೈದ್ಯಾಧಿಕಾರಿಗಳಿಂದ ಪಡೆದಿರಬೇಕು. ಅಭ್ಯರ್ಥಿಯು ಈ ಪ್ರಮಾಣ ಪತ್ರವನ್ನು ಅರ್ಜಿ ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕದೊಳಗೆ ಪಡೆದುಕೊಂಡಿರಬೇಕು.

ಸರಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್/52/ಎಸ್.ಅರ್.ಅರ್.99/ದಿನಾಂಕ: 29-11-2002 ರ ಪ್ರಕಾರ ಅಧಿನಿಯಮದ ಸೆಕ್ಷನ್ 32 ರ ಪ್ರಕಾರ **(persons with disabilities) (equal opportunities),protection of rights and full participation) act 1995 ರಾಜ್ಯಸರಕಾರವು ವಿವಿಧ ಇಲಾಖೆಗಳಲ್ಲಿ ಅಂಗವಿಕಲರು ನಿರ್ವಹಿಸಬಹುದಾದ ಹುದ್ದೆಗಳನ್ನು ಗುರುತಿಸಿದೆ, ಅದರಂತೆ ಶೇ.3 ರಷ್ಟು ಮೀಸಲಾತಿಯನ್ನು ಅರ್ಹ ಹುದ್ದೆಗಳಿಗೆ ನೀಡಲಾಗುತ್ತದೆ.**

1) ದೈಹಿಕ ಅಂಗವಿಕಲ ಅಭ್ಯರ್ಥಿಗಳು ಸರಕಾರಿ/ಜಿಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿರುವ ಮೂಳೆ ತಜ್ಞ (**Orthopedic surgeon**) ರಿಂದ ದೈಹಿಕ ಅಂಗವಿಕಲತೆಯ ಮೌಲಿಕರಣವನ್ನು **Alimco kanpur(WHO std)** ಇದರ ಆಧಾರದ ಮೇಲೆ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ಶ್ರವಣ ದೋಷ ಹೊಂದಿರುವ ಅಂಗವಿಕಲ ಅಭ್ಯರ್ಥಿಗಳ ಪ್ರಮಾಣ ಪತ್ರದಲ್ಲಿ ಶ್ರವಣ ದೋಷದ ನಷ್ಟವನ್ನು ಡೆಸಿಬಲ್ (**decibels**) ಗಳಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

ಈ) ಮಾಜಿ ಸೈನಿಕರ ಗುಂಪಿನಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳಿಗೆ ಸೂಚನೆಗಳು:

**1. ಮಾಜಿ ಸೈನಿಕರ ಗುಂಪಿನಲ್ಲಿ ಆಯ್ಕೆಗೆ ಕೆಳಗಿನವರು ಅರ್ಹರು:-**

ಮಾಜಿ ಸೈನಿಕ ಎಂದರೆ ಸಶಸ್ತ್ರ ದಳಗಳಾದ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿ. ಅಂದರೆ:-

**(i)** ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ ವ್ಯಕ್ತಿ.

**ಅಥವಾ**

**ii)** ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಗೆ ಅನರ್ಹನಾದವನೆಂದೋ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಿಂದ ಬಿಡುಗಡೆಯಾದ ವ್ಯಕ್ತಿ.

**ಅಥವಾ**

**(iii)** ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

**ಅಥವಾ**

**(iv)** ತನ್ನ ಸ್ವಂತ ಕೋರಿಕೆಯ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ಧಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ.

**ಅಥವಾ**

**(v)** ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿ.
1) ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು.
2) ಮಿಲಿಟರಿ ಸೇವೆಯಿಂದ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.
3)ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು.

2. ಮಾಜಿ ಸೈನಿಕ ಅವಲಂಬಿತರ ಗುಂಪಿನಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು ಅಂದರೆ:-

ಕೇಂದ್ರ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು.**(ಸಂಬಂಧಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಹಾಗೂ ಮಲಮಕ್ಕಳು ಮಾಜಿ ಸೈನಿಕರ ಅವಲಂಬಿತರಡಿಯಲ್ಲಿ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರಿಗೆ ವಯೋಮಿತಿ ಸಡಿಲಿಕೆ ಇಲ್ಲ)**

**ವಿವರಣೆ:**

i) ಈ ಸೌಲಭ್ಯಕ್ಕೆ ಡಿಫೆನ್ಸ್ ಸೆಕ್ಯುರಿಟಿ ಕಾರ್ಪ್ಸ್, ಜನರಲ್ ರಿಸರ್ವ್ ಇಂಜನಿಯರಿಂಗ್ ಕಾರ್ಪ್ಸ್, ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಅರ್ಹರಲ್ಲ.

**ii)** ಕೇಂದ್ರ ಸಶಸ್ತ್ರದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಪುನರ್ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ, ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗೆ ನೇಮಕ ಹೊಂದುವಂತಿಲ್ಲ.

ಉ) ಯೋಜನಾ ನಿರಾಶ್ರಿತರ ಗುಂಪಿನಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳಿಗೆ ಸೂಚನೆಗಳು:-

1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 71 ಸೇನೆನಿ 2001 ದಿನಾಂಕ 24-10-2002 ರನ್ವಯ ಶೇಕಡ 5 ರಷ್ಟು ಹುದ್ದೆಗಳನ್ನು ಯೋಜನಾ ನಿರಾಶ್ರಿತರ ಗುಂಪಿಗೆ ಮೀಸಲಿಡಲಾಗಿದೆ.
2. ಅಧಿಸೂಚನಾ ಸಂಖ್ಯೆ: ಡಿಪಿಎಆರ್ 23 ಎಸ್.ಆರ್.ಆರ್. 99 ದಿನಾಂಕ 23-11-2000 ದಲ್ಲಿ ಸರ್ಕಾರ ರಾಜ್ಯ ಸಿವಿಲ್ ಸೇವೆಗಳಲ್ಲಿನ **"ಗ್ರೂಪ್ ಸಿ ಮತ್ತು ಡಿ"** ಹುದ್ದೆಗಳ ನೇರ ನೇಮಕಾತಿಗಾಗಿ ಶೇಕಡ 5 ರಷ್ಟು ರಿಕ್ತ ಸ್ಥಾನಗಳನ್ನು **"ಯೋಜನೆಗಳಿಂದ ನಿರಾಶ್ರಿತರಾದವರ ಕುಟುಂಬಗಳ"** ಅಭ್ಯರ್ಥಿಗಳಿಂದ ಭರ್ತಿ ಮಾಡಲು ಆಸ್ಪದ ಕಲ್ಪಿಸಿದ್ದು, ಎಲ್ಲಾ ಅಂಶಗಳು (ಪಡೆದಿರುವ ಪ್ರತಿಶತ ಅಂಕಗಳು ಹಾಗೂ ಜನ್ಮ ದಿನಾಂಕ ಸರಿಸಮಾನ ಇದ್ದಲ್ಲಿ) (when all things are being equal) ಈ ಕೆಳಕಂಡ ಆದ್ಯತೆಯಾನುಸಾರ ಭರ್ತಿ ಮಾಡಲು ನಿಗದಿಪಡಿಸಿದೆ:-

(i)ಯೋಜನೆಗಾಗಿ ಯಾವುದೇ ವ್ಯಕ್ತಿಯು ತನಗೆ ಆಧಾರವಾಗಿದ್ದ ವಾಸದ ಮನೆಯನ್ನು ಮತ್ತು ಕೊನೆಪಕ್ಷ ಶೇಕಡ 50 ರಷ್ಟು ಕೃಷಿ ಜಮೀನನ್ನು ಯೋಜನೆಗಾಗಿ ಕಳೆದುಕೊಳ್ಳಲಾದ ಅವನ ಕುಟುಂಬದ ಸದಸ್ಯರು.

(ii)ಯೋಜನೆಯ ಪೂರ್ವದ ಅವಧಿಯಲ್ಲಿ ಯಾವುದೇ ವ್ಯಕ್ತಿಯು ಭೂರಹಿತನಾಗಿದ್ದು, ತದನಂತರ ತನ್ನ ವಾಸದ ಮನೆಯನ್ನು ಯೋಜನೆಗಾಗಿ ಕಳೆದುಕೊಂಡ ವ್ಯಕ್ತಿಯ ಕುಟುಂಬದ ಸದಸ್ಯರು.

(iii)ಯೋಜನೆಗಾಗಿ ಯಾವುದೇ ವ್ಯಕ್ತಿಯು ತನಗೆ ಆಧಾರವಾಗಿದ್ದ ಶೇಕಡ 50ರಷ್ಟು ಮಾತ್ರ ಅಥವಾ ಅದಕ್ಕಿಂತ ಕಡಿಮೆ ಬೇಸಾಯದ ಭೂಮಿಯನ್ನು ಕಳೆದುಕೊಂಡ ವ್ಯಕ್ತಿಯ ಕುಟುಂಬದ ಸದಸ್ಯರು.

(iv) ಯೋಜನೆಗಾಗಿ ಇನ್ನಾವುದೇ ಪ್ರಕರಣದಲ್ಲಿ ನಿರಾಶ್ರಿತರಾದವರ ಕುಟುಂಬದ ಸದಸ್ಯರು.

**ವಿವರಣೆ:-** ಈ ಮೇಲ್ಕಂಡ ಉಪ ನಿಯಮದ ಉದ್ದೇಶ:-

(1) **"ಯೋಜನೆಗಳಿಂದ ನಿರಾಶ್ರಿತರಾದ ವ್ಯಕ್ತಿ "** ಎಂದರೆ, ಬಾಡಿಗೆ ಆಧಾರದ ಮೇಲೆ, ಅನುಭೋಗದ ಅವಧಿಗೆ ಜಮೀನು ಪಡೆದ ವ್ಯಕ್ತಿ ಸರ್ಕಾರದಿಂದ ಗುತ್ತಿಗೆ ಪಡೆದ, ಅಥವಾ ಇತರೆ ಆಸ್ತಿಗಳನ್ನು ಹೊಂದಿದ ಮಾಲೀಕನಾಗಿದ್ದು, ಯೋಜನೆಗಾಗಿ ಭೂಮಿಯನ್ನು : ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕಿಂತ ಪೂರ್ವಭಾವಿಯಾಗಿ ಅಧಿಸೂಚನೆ ಹೊರಡಿಸುವ 5 ವರ್ಷಗಳ ಮುಂಚಿತವಾಗಿ ಯಾವುದೇ ವ್ಯಕ್ತಿಯ ಸ್ವಾಧೀನದಲ್ಲಿರುವ ಗ್ರಾಮೀಣದಲ್ಲಿನ ಅಥವಾ ಯೋಜನೆಯ ಪರಿಣಾಮದಿಂದಾಗಿ ಅದರ ವ್ಯಾಪ್ತಿಯಲ್ಲಿ ಬರುವಂತಹ ಜಮೀನು ಅಥವಾ ಆಸ್ತಿಯನ್ನು ಯೋಜನೆಯ ಉದ್ದೇಶಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಲಾದ ಕಾರಣದಿಂದಾಗಿ ನಿರಾಶ್ರಿತನಾದ ವ್ಯಕ್ತಿ.

(2) **"ಕುಟುಂಬ ಸದಸ್ಯರು"** ಯೋಜನೆಗಳಿಂದ ನಿರಾಶ್ರಿತರಾದ ವ್ಯಕ್ತಿಗಳ ಸಂಬಂಧವೇನೆಂದರೆ ಅಂತಹ ವ್ಯಕ್ತಿಯ ಕುಟುಂಬವು ಆತನೊಂದಿಗೆ ವಾಸವಾಗಿರುವ ಮತ್ತು ಅವನ / ಅವಳ ಮೇಲೆ ಪಾಲನೆ ಹಾಗೂ ಪೋಷಣೆಗಾಗಿ ಅವಲಂಬಿತರಾಗಿರುವ ಗಂಡ / ಹೆಂಡತಿ, ಗಂಡು ಮಕ್ಕಳು, ಅವಿವಾಹಿತ ಹೆಣ್ಣು ಮಕ್ಕಳು, ಸೋದರರು ಮತ್ತು ಸೋದರಿಯರು.

(3) **"ಯೋಜನೆ"** ಎಂದರೆ, ನಿರಾಶ್ರಿತ ವ್ಯಕ್ತಿಗಳಿಂದ ಪಡೆಯಲಾದ ಜಮೀನನ್ನು ನಿರ್ಮಾಣ ಅಥವಾ ನೀರಾವರಿಯ ಉದ್ದೇಶಕ್ಕಾಗಿ ಅಥವಾ ನೀರು ಸರಬರಾಜು ಮಾಡುವ ಅಭಿವೃದ್ಧಿ ಕಾರ್ಯದ ವಿಸ್ತರಣೆ ಅಥವಾ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಪೂರೈಕೆ ಅಥವಾ ವಿದ್ಯುಚ್ಛಕ್ತಿ ಕಾರ್ಯಗಳ ಅನುಕೂಲಕರ ಅಭಿವೃದ್ಧಿಯೂ ಸೇರಿದಂತೆ ಸಾರ್ವಜನಿಕ ಉಪಯೋಗಗಳಿಗಾಗಿ ನಿರ್ಮಾಣ ಸುಧಾರಣೆ ಅಥವಾ ಅಭಿವೃದ್ಧಿ ಕಾರ್ಯಗಳ ಯೋಜನೆ.

**ವಿಶೇಷ ಸೂಚನೆ:-** ಈ ಮೇಲ್ಕಂಡ ನಿಯಮಗಳು ಪ್ರಾರಂಭವಾಗುವುದಕ್ಕಿಂತ 20 ವರ್ಷಗಳ ಮುಂಚಿತವಾಗಿ ಯಾವುದೇ ಗ್ರಾಮೀಣದಲ್ಲಿನ ಅಥವಾ ಪ್ಲಾಟ್ ಅಥವಾ ಇನ್ನಿತರ ಯಾವುದೇ ಆಸ್ತಿಗಳನ್ನು ಹೊಂದಿದ್ದು, ಅಂತಹ ಆಸ್ತಿಗಳನ್ನು ಯೋಜನೆಗಳ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡಿದ್ದಲ್ಲಿ, ಅಂತಹ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡ ಕಾರಣದಿಂದಾಗಿ ನಿರಾಶ್ರಿತರಾದ ಕುಟುಂಬದ ಸದಸ್ಯರು/ವ್ಯಕ್ತಿಗಳು ಈ ನಿಯಮಗಳಿಗೆ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.

ಯೋಜನೆಗಳಿಂದ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳು ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 44 ಸೇನೇನಿ ದಿನಾಂಕ 27-07-2001 ರಲ್ಲಿ ನಿಗದಿಪಡಿಸಲಾದ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಶೀಲ್ದಾರ್ ರವರಿಂದ ಪಡೆದು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

ಊ) ಕನ್ನಡ ಮಾಧ್ಯಮದ ಅಭ್ಯರ್ಥಿ:-

ಸರ್ಕಾರವು ಅಧಿಸೂಚನೆ ಸಂಖ್ಯೆ: ಡಿಪಿಎಆರ್ 71 ಎಸ್ಆರ್‌ಅರ್ 2001 ದಿನಾಂಕ:24-10-2002 ರಲ್ಲಿ ಹೊರಡಿಸಿದ **ಕರ್ನಾಟಕ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ (9)**(1)(ಸಿ)ರ ಅನ್ವಯ ಅಭ್ಯರ್ಥಿಯು 1 ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆ ಎನ್ನುವ ಬಗ್ಗೆ ಸಂಬಂಧಪಟ್ಟ ಶಾಲಾ ಮುಖ್ಯಸ್ಥರಿಂದ ಪ್ರಮಾಣ ಪತ್ರವನ್ನು ಪಡೆದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ಸಹಿ ಮಾಡಿಸಿ ಅರ್ಜಿಯೊಡನೆ ಲಗತ್ತಿಸಬೇಕು, ಅಭ್ಯರ್ಥಿಯು ಈ ಪ್ರಮಾಣ ಪತ್ರವನ್ನು ಅರ್ಜಿ ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕದೊಳಗೆ ಪಡೆದುಕೊಂಡಿರಬೇಕು.

**14. ಯಾವುದೇ ವ್ಯಕ್ತಿಯು ನೇಮಕಾತಿಗೆ ಈ ಕೆಳಕಂಡ ಸಂದರ್ಭದಲ್ಲಿ ಅರ್ಹನಾಗುವುದಿಲ್ಲ.**

1) ಯಾವುದೇ ನಿಷೇಧಿತ ಸಂಘ ಸಂಸ್ಥೆಯ ಸದಸ್ಯನಾಗಿರುವಲ್ಲಿ ಅಥವಾ ಸದಸ್ಯರಾಗಿದ್ದಲ್ಲಿ ಅಥವಾ ಯಾವುದೇ ನಿಷೇಧಿತ ಸಂಸ್ಥೆಯ ಕಾರ್ಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲಿ.

2) ಭಾರತ ಸಂವಿಧಾನಕ್ಕೆ ಚ್ಯುತಿ ತರುವ ಕಾರ್ಯದಲ್ಲಿ ಪ್ರವೃತ್ತನಾದಲ್ಲಿ

3) ಕಾನೂನು ಭಂಗ ಮಾಡಿ ಹಿಂಸಾಕೃತ್ಯದಲ್ಲಿ ತೊಡಗಿದವರಾಗಿದ್ದರೆ.

4) ಭಾರತ ದೇಶದ ಸಾರ್ವಭೌಮ ಹಾಗೂ ಸುಭದ್ರತೆಗೆ ಧಕ್ಕೆ ತರುವ ಕಾರ್ಯದಲ್ಲಿ ಪ್ರವೃತ್ತರಾದರೆ.

5) ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಸೇವೆಯಿಂದ ಉಚ್ಚಾಟನೆಗೊಂಡ ಪ್ರಸಂಗಗಳಲ್ಲಿ.

6) ವ್ಯಕ್ತಿಯು ನ್ಯಾಯಬಾಹಿರ ಕೃತ್ಯವ್ಯಗಳಲ್ಲಿ ತೊಡಗಿ ಅಪರಾಧಕ್ಕೆ ಒಳಗಾದ ಪ್ರಸಂಗಗಳಲ್ಲಿ ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರಷ ಅಭ್ಯರ್ಥಿಯು ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿಯಿರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೆ ನೇಮಕಾತಿಗೆ ಅರ್ಹರಾಗುವುದಿಲ್ಲ.

7) ಅಭ್ಯರ್ಥಿಯು ಮತ್ತೊಬ್ಬ ವ್ಯಕ್ತಿಯಂತೆ ನಟಿಸಿ ವಂಚಿಸಿದ, ದಾಖಲೆಗಳನ್ನು ತಿದ್ದಿದ, ಸೃಷ್ಟಿಸಿದ, ಸರಿಯಿಲ್ಲದ, ಸುಳ್ಳು ಅಥವಾ ದೋಷಪೂರ್ಣ ವಿವರಗಳನ್ನು ನೀಡುವ, ನೇಮಕಾತಿಗಾಗಿ ನಡೆಸುವ ನೇರ ನೇಮಕಾತಿಯಲ್ಲಿ ಅವನ/ಅವಳ ನೇಮಕಾತಿಗಾಗಿ ಸಂಬಂಧಿಸಿದಂತೆ ಯಾವುದೇ ಇತರ ಅಕ್ರಮ/ಅನುಚಿತ ವಿಧಾನಗಳನ್ನು ಅನುಸರಿಸಿದ ಕಾರಣದಿಂದಾಗಿ ತಪ್ಪಿತಸ್ಥನೆಂದು ಕಂಡು ಬಂದಲ್ಲಿ ಅವನ/ಅವಳ ಅಭ್ಯರ್ಥಿತನವನ್ನು ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಅವರನ್ನು ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡಿಸಲು ಸಂಬಂಧಪಟ್ಟ ಇಲಾಖೆಗೆ ತಿಳಿಸಲಾಗುವುದು.

8) ಈ ನೇಮಕಾತಿಯು, ಮತ್ತು ಈ ಅಧಿಸೂಚನೆಯಲ್ಲಿ ತಿಳಿಸಿರುವ ಆದೇಶಗಳು, ಜ್ಞಾಪನಗಳು, ಸುತ್ತೋಲೆಗಳು ಕಾಲದಿಂದ ಕಾಲಕ್ಕೆ ಸರ್ಕಾರ ಮತ್ತು ಇಲಾಖೆ ಹೊರಡಿಸಿರುವ ಆದೇಶಗಳು ಮತ್ತು ತಿದ್ದುಪಡಿಗೆ ಒಳಪಟ್ಟಿರುತ್ತದೆ.

9) ಆಯ್ಕೆ ಮತ್ತು ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಆಯ್ಕೆಗೆ ಪರಿಗಣಿಸಿರುವ ಅಂಶಗಳ ಬಗ್ಗೆ ವ್ಯತ್ಯಾಸ ಕಂಡುಬಂದಲ್ಲಿ ಅಥವಾ ಕೋರ್ಟಿನ ತೀರ್ಪುಗಳು, ಇಲಾಖೆ ಸುತ್ತೋಲೆಗಳು, ಸರಕಾರದ ನಿರ್ದೇಶನಗಳು ಬಂದಲ್ಲಿ ಪರಿಷ್ಕರಿಸುವ ಅಧಿಕಾರವನ್ನು ಆಯ್ಕೆ ಪ್ರಾಧಿಕಾರ ಹೊಂದಿರುತ್ತದೆ.

**15) ಸಾಮಾನ್ಯ ಷರತ್ತು**

ಯಾವುದೇ ಕಾರಣಗಳನ್ನು ನಮೂದಿಸದೆ ಅಗತ್ಯತೆ ಆಧಾರದ ಮೇಲೆ ಪ್ರಕಟಣೆ ನೀಡಿರುವ ಹುದ್ದೆಗಳ ಸಂಖ್ಯೆಯಂತೆ ನೇಮಕಾತಿ ಮಾಡಲು ಅಥವಾ ರದ್ದುಗೊಳಿಸಲು ಅಥವಾ ಬದಲಾವಣೆ ಮಾಡುವ ಅಧಿಕಾರವನ್ನು ಆಯ್ಕೆ ಸಮಿತಿಯು ಹೊಂದಿದೆ.

ವಿಶೇಷಾಧಿಕಾರಿಗಳು
ಪಿಎಂಎಸ್‌ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

**(ಆದೇಶ ಸಂಖ್ಯೆ ಎಸ್.ಡಬ್ಲ್ಯು.ಡಿ. 132 ಎಸ್.ಎ.ಡಿ. 97 ಬೆಂಗಳೂರು ದಿನಾಂಕ 08-02-2000 ಕ್ಕೆ ಸಂಬಂಧಿಸಿದಂತೆ)**

**ನಮೂನೆ –ಡಿ**

(ನಿಯಮ 3ಎ (2) (3) ನೋಡಿ)

ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ

**ಪ್ರಮಾಣ ಪತ್ರ**

(1)--------- ರಾಜ್ಯದ /ಕೇಂದ್ರಾಡಳಿತ ಪ್ರದೇಶದ------------ ಜಿಲ್ಲೆಯ /ವಿಭಾಗದ--------- ಗ್ರಾಮ /ಪಟ್ಟಣದ ನಿವಾಸಿಯಾದ ಶ್ರೀ/ಶ್ರೀಮತಿ:---------ಎಂಬುವವರ ಮಗ/ಮಗಳಾದ ಶ್ರೀ/ಶ್ರೀಮತಿ----------- ಇವರು ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟು ಎಂದು ಮಾನ್ಯ ಮಾಡಲಾಗಿರುವ ಜಾತಿ/ಬುಡಕಟ್ಟಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

- ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951

(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ತಿದ್ದುಪಡಿ) ಆದೇಶ 1956, ಮುಂಬೈ ರಾಜ್ಯ ಪುನರ್ರಚನಾ ಅಧಿನಿಯಮ , 1960 ಪಂಜಾಬ್ ರಾಜ್ಯ ಪುನರ್ರಚನಾ ಅಧಿನಿಯಮ, 1966 ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ ಪುನರ್ರಚನಾ ಅಧಿನಿಯಮ, 1971 ರ ಮೂಲಕ ತಿದ್ದುಪಡಿಯಾದಂತೆ)

- ಸಂವಿಧಾನ (ಜಮ್ಮು ಮತ್ತು ಕಾಶ್ಮೀರ ) ಅನುಸೂಚಿತ ಜಾತಿಗಳ ಆದೇಶ, 1956
- ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ 1976 ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ) ಅನುಸೂಚಿತ ಬುಡಕಟ್ಟುಗಳ ಆದೇಶ, 1959
- ಸಂವಿಧಾನ (ದಾದರ್ ಮತ್ತು ನಗರ್ ಹವೇಲಿ) ಅನುಸೂಚಿತ ಜಾತಿಗಳ ಆದೇಶ 1962
- ಸಂವಿಧಾನ (ಪಾಂಡಿಚೇರಿ ) ಅನುಸೂಚಿತ ಜಾತಿಗಳ ಆದೇಶ 1964
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967 ೦ ಸಂವಿಧಾನ (ಗೋವ, ದಮನ್ ಮತ್ತು ದೀವ್) ಅನುಸೂಚಿತ ಜಾತಿ / ಬುಡಕಟ್ಟುಗಳ ಆದೇಶ 1988

- ಸಂವಿಧಾನ (ನಾಗಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

2. ಶ್ರೀ/ಶ್ರೀಮತಿ/ಕುಮಾರಿ ------------- ಮತ್ತು ಅಥವಾ ಅವನ /ಅವಳ ಕುಟುಂಬವು --------ರಾಜ್ಯ/ಕೇಂದ್ರಾಡಳಿತ ಪ್ರದೇಶದ -----------------ಜಿಲ್ಲಾ/ವಿಭಾಗದ--------------ಗ್ರಾಮ/ ಪಟ್ಟಣದ ಸಾಮಾನ್ಯ ನಿವಾಸಿ(ಗಳು)

ಸಹಿ.................................

ತಹಶೀಲ್ದಾರ್ .....................

ಸ್ಥಳ
ದಿನಾಂಕ:

ಪದನಾಮ: ಕಛೇರಿ ಮೊಹರಿನೊಂದಿಗೆ

**ರಾಜ್ಯ/ಕೇಂದ್ರಾಡಳಿತ ಪ್ರದೇಶ**

ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟುಬಿಡಿ/ಹೊಡೆದು ಹಾಕಿ

**ಸೂಚನೆ :** ಇಲ್ಲಿ ಉಪಯೋಗಿಸುವ " ಸಾಮಾನ್ಯ ನಿವಾಸಿಗಳು" ಎಂಬ ಪದಾವಳಿಯು ಪ್ರಜಾ ಪ್ರಾತಿನಿಧ್ಯ ಅಧಿನಿಯಮ್ 1950 ರ 20ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ.

ಭಾರತ ಸರ್ಕಾರದ ಪತ್ರ ಸಂಖ್ಯೆ : ಬಿಸಿ/12028/2/76 ಎಸ್.ಸಿ.ಟಿ.1 ಗೃಹಮಂತ್ರಾಲಯದ ಅನುಸಾರವಾಗಿ ಅಂಥ ಪ್ರಮಾಣ ಪತ್ರ ನೀಡಲು ಸಕ್ರಮವಾಗಿರುವುದಕ್ಕಾಗಿ ಭಾರತ ಸರ್ಕಾರದ (ಸಿಬ್ಬಂದಿ ಮತ್ತು ಅಡಳಿತ ಸುಧಾರಣಾ ಇಲಾಖೆ) ಪತ್ರ ಸಂಖ್ಯೆ 13/2/74 ಇ.ಎಸ್.ಟಿ (ಎಸ್.ಸಿ.ಟಿ) ದಿನಾಂಕ 5ನೇ ಆಗಸ್ಟ್ 1975 ರಲ್ಲಿ ನಮೂದಿಸಿದ ಪ್ರಾಧಿಕಾರಿಯು, ರಾಷ್ಟ್ರಪತಿಗಳು ಸಂಬಂಧಪಟ್ಟ ಆದೇಶದ ಅಧಿಸೂಚನೆಯನ್ನು ಹೊರಡಿಸಿದ ಸಮಯದಲ್ಲಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು ತನ್ನ ಖಾಯಂ ವಾಸಸ್ಥಳವನ್ನು ಹೊಂದಿದ್ದ ಸ್ಥಳಕ್ಕೆ ಸೇರಿದವರೊಬ್ಬರಾಗಿರತಕ್ಕದ್ದು. ಅದೇ ರೀತಿಯಲ್ಲಿ ಒಂದು ತಾಲ್ಲೂಕಿನ ರೆವಿನ್ಯೂ ಪ್ರಾಧಿಕಾರಿಯು ಇನ್ನೊಂದು ತಾಲ್ಲೂಕಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧ ಪಟ್ಟ ಪ್ರಮಾಣ ಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರಿಯಾಗುವುದಿಲ್ಲ.

**(ಆದೇಶ ಸಂಖ್ಯೆ :ಎಸ್.ಡಬ್ಲ್ಯು.ಡಿ. 132 ಎಸ್.ಎ.ಡಿ. 97 ಬೆಂಗಳೂರು ದಿನಾಂಕ 08-02-2000 ಕ್ಕೆ ಸಂಬಂಧಿಸಿದಂತೆ)**

**<u>ನಮೂನೆ –ಇ</u>**

(ನಿಯಮ 3ಎ (2) (3) ನೋಡಿ)

**(ಹಿಂದುಳಿದ ವರ್ಗಗ ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ)**

------------ಗ್ರಾಮ/ ಪಟ್ಟಣ /ನಗರದ ನಿವಾಸಿಯಾದ ಶ್ರೀ/ಶ್ರೀಮತಿ--------------- ಇವರು ಹಿಂದುಳಿದ ವರ್ಗಗಳ (ಪ್ರವರ್ಗ)-------------ಜಾತಿಯ ------------- ಉಪಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ :

ದಿನಾಂಕ :

ತಹಶೀಲ್ದಾರ್

-------------ತಾಲ್ಲೂಕು

ಕಛೇರಿಯ ಮೊಹರು

**ಆದೇಶ ಸಂಖ್ಯೆ :ಎಸ್.ಡಬ್ಲ್ಯು.ಡಿ. 132 ಎಸ್.ಎ.ಡಿ. 97 ಬೆಂಗಳೂರು ದಿನಾಂಕ 08-02-2000 ಕ್ಕೆ ಸಂಬಂಧಿಸಿದಂತೆ)**

**<u>ನಮೂನೆ – ಎಫ್</u>**

(ನಿಯಮ 3ಎ (2) (3) ನ್ನು ನೋಡಿ)

**(ಹಿಂದುಳಿದ ವರ್ಗ -2ಎ, 2ಬಿ, 3ಎ, 3ಬಿ ಗಳಿಗೆ ಸೇರಿದ ಅಭ್ಯರ್ಥಿಗೆ ನೀಡುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ)**

---------------ರಲ್ಲಿ ವಾಸವಗಿರುವ ಶ್ರೀ/ ಶ್ರೀಮತಿ-------------------------- ಇವರ ಮಗ / ಮಗಳು / ಪತಿ / ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ ------------------ ಇವರು ಮತ್ತು ಆತನ/ಆವಳ ತಂದೆ/ ತಾಯಿ/ ಪೋಷಕರು/ ಪತ್ನಿ/ ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ 30033002 ರಲ್ಲಿ ನಿರ್ದಿಷ್ಟ ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ / ತಾಯಿ/ ಪೋಷಕರಾಗಲಿ/ ಪತ್ನಿ / ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1 ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು;

**ಅಥವಾ**

ಸಾರ್ವಜನಿಕ ವಲಯ ಉದ್ಯಮದಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ;

**ಅಥವಾ**

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ. 6000 12000/ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು

**ಅಥವಾ**

ಆತನ/ಆಕೆಯ ತಂದೆ/ ತಾಯಿ/ ಪೋಷಕರು/ ಪತ್ನಿ/ ಪತಿಯ ಆದಾಯವು ಎರಡು ಲಕ್ಷ ಮೀರುವುದಿಲ್ಲವೆಂದು:

**ಅಥವಾ**

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ರಲ್ಲಿ ನಿಗದಿಪಡಿಸಿರುವಂತೆ ಆತನ/ ಆಕೆಯ ತಂದೆ/ ತಾಯಿ/ ಪೋಷಕರು/ ಪತ್ನಿ/ ಪತಿಯು ಅಥವಾ ಇವರಿಬ್ಬರೂ 10 ಯುನಿಟ್ ಗಿಚಿತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2002 ದಿನಾಂಕ : 30-03-2002 ರ ಅನವಯ ಶ್ರೀ/ ಶ್ರೀಮತಿ/ಕುಮಾರಿ----------- ಇವರು---------- ಜಾತಿಗೆ ಸೇರಿದ-------------- ಉಪಜಾತಿಯವರಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ : ಎಸ್ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ: 30032002 ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ---------- (2ಎ, 2ಬಿ, 3ಎ, 3ಬಿ) ಸೇರಿರುತ್ತಾರೆ.

ಸ್ಥಳ : ತಹಶೀಲ್ದಾರ್

ದಿನಾಂಕ : ______________ತಾಲ್ಲೂಕು

ಕಛೇರಿಯ ಮೊಹರು

# ನಮೂನೆ -1

ಜನರಲ್ ಮೆರಿಟ್ ಅಭ್ಯರ್ಥಿಗಳು ಮೇಲುಸ್ಥರಕ್ಕೆ ಸೇರಿಲ್ಲವೆಂದು ದೃಢೀಕರಿಸಿ, ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಮಾಣ ಪತ್ರ.
(ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿಮಾಡಬೇಕಾದ ನಮೂನೆ)

ತಹಶೀಲ್ದಾರ್
-----------ತಾಲ್ಲೂಕು
------------ಜಿಲ್ಲೆ

ಮಾನ್ಯರೆ,
ಶ್ರೀ/ಶ್ರೀಮತಿ-------------ಎಂಬುವವರ ಮಗ/ಮಗಳು/ಹೆಂಡತಿ/ಗಂಡ-----------
ಆದ ನಾನು ಮೇಲುಸ್ಥರದಲ್ಲಿ (Creamy layer) ಬರುವುದಿಲ್ಲವೆಂದು ನೇರ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ ಕೋರುತ್ತೇನೆ.

| | | | | |
|---|---|---|---|---|
| 1. | ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ | | | |
| 2. | ಅಭ್ಯರ್ಥಿಯ ಸ್ವಂತ ಸ್ಥಳ | ಗ್ರಾಮ | ತಾಲ್ಲೂಕು | ಜಿಲ್ಲೆ |
| | | | | |
| 3 | ಅಭ್ಯರ್ಥಿಯ ಹುಟ್ಟಿದ ದಿನಾಂಕ, ವಯಸ್ಸು , ಹುಟ್ಟಿದ ಸ್ಥಳ | | | |
| 4 | ಅಭ್ಯರ್ಥಿಯ ತಂದೆ/ ತಾಯಿ/ ಪೋಷಕ/ ಹೆಂಡತಿ/ಗಂಡ ಹೆಸರು ಮತ್ತು ಉದ್ಯೋಗ (ಸರ್ಕಾರಿ/ಅರೆಸರ್ಕಾರಿ/ಸಾರ್ವಜನಿಕ ಉದ್ಯಮ/ಖಾಸಗಿ) | | | |
| 5 | ಅಭ್ಯರ್ಥಿಯ ಪ್ರಸ್ತುತ ಅಂಚೆ ವಿಳಾಸ (ಸ್ಪಷ್ಟವಾಗಿ ನಮೂದಿಸಿ) | | | |
| 6 | ಅಭ್ಯರ್ಥಿಯ ಖಾಯಂ ಅಂಚೆ ವಿಳಾಸ | | | |
| 7 | ಅಭ್ಯರ್ಥಿಯ ಪ್ರಾಥಮಿಕ, ಮಾದ್ಯಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಣದ ವ್ಯಾಸಂಗ ಮಾಡಿದ ಶಾಲೆಗಳ ವಿವರ | | | |
| 8 | ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ/ ತಾಯಿ/ಪೋಷಕ(ತಂದೆ/ತಾಯಿ ಜೀವಂತವಾಗಿರದಿದ್ದಲ್ಲಿ)/ಹೆಂಡತಿ/ಗಂಡ ಇವರ ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ<br>1. ವೇತನ (ವೇತನ ಶ್ರೇಣಿ)<br>2. ಜಮೀನಿನ ವಿವರ<br>3. ಇತರೆ ಮೂಲಗಳು | | | |
| 9 | ಆದಾಯ ತೆರಿಗೆ ಪಾವತಿದಾರರೆ? | | | |
| 10. | ಸಂಪತ್ತು ತೆರಿಗೆ ಪಾವತಿದಾರರೇ? | | | |
| 11. | ಮಾರಟ ತೆರಿಗೆ ಪಾವತಿದಾರರೇ? | | | |

ಪ್ರಮಾಣೀಕೃತ ಘೋಷಣೆ

ಈ ಮೇಲೆ ನನ್ನಿಂದ ಒದಗಿಸಲಾದ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯವೆಂದು ಈ ಮೂಲಕ ಪ್ರಮಾಣೀಕರಿಸಿ ಘೋಷಿಸುತ್ತೇನೆ.

ಸ್ಥಳ: ತಮ್ಮ ವಿಧೇಯ

ದಿನಾಂಕ: ಅಭ್ಯರ್ಥಿಯ ಸಹಿ

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತಾ , ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ , ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ/ತಾಯಿ/ಪೋಷಕರು (ತಂದೆತಾಯಿ ಜೀವಂತರಾಗಿರದಿದ್ದಲ್ಲಿ)
/ಹೆಂಡತಿ/ಗಂಡ ಇವರ ಸಹಿ

**ಇಬ್ಬರು ಸ್ಥಳೀಯ ಸಾಕ್ಷಿಗಳು**

ಅಭ್ಯರ್ಥಿಯ ಮತ್ತು ತಂದೆ/ ತಾಯಿ/ಪೋಷಕರು /ಗಂಡ/ ಹೆಂಡತಿ ಇವರನ್ನು ಹಾಗೂ ಇವರ ಸಹಿಗಳನ್ನು ನಾವು ಗುರುತಿಸುತ್ತೇವೆ.

ಸಾಕ್ಷಿಗಳ ಸಹಿ : 1.
(ಪೂರ್ಣ ವಿಳಾಸದೊಂದಿಗೆ) : 2.

**ಪರಿಶೀಲನಾ ಪ್ರಮಾಣ ಪತ್ರ**

1. ಶ್ರೀ/ಶ್ರೀಮತಿ------------ ಇವರ ಮಗ ,ಮಗಳು , ಹೆಂಡತಿ, ಗಂಡ ಶ್ರೀ/ಶ್ರೀಮತಿ/ಕುಮಾರಿ-- ------- ---ಎಂಬುವವರು------------ ಜಿಲ್ಲೆಯ-------------- ವಿಭಾಗ -------------ಗ್ರಾಮ / ಪಟ್ಟಣ /ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆಂದು ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.
2. ಶ್ರೀ/ಶ್ರೀಮತಿ/ಕುಮಾರಿ----------- ಇರವ ತಂದೆ, ತಾಯಿ, ಪೋಷಕರು ಇವರು ಸರ್ಕಾರಿ ಆದೇಶ ಸಂಖ್ಯೆ ಎಸ್.ಡಬ್ಲ್ಯೂ. 251 ಬಿ.ಸಿ.ಎ. 94.ದಿನಾಂಕ 31/01/1995 ರನ್ವಯ ಜ೯ನರಲ್ ಮೆರಿಟ್ ವರ್ಗದ ಮೇಲುಸ್ಥರದಲ್ಲಿ (Creamy layer) ಬರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ:
ದಿನಾಂಕ:

ತಹಶೀಲ್ದಾರ್
-----------ತಾಲ್ಲೂಕು

**ಸೂಚನೆಗಳು:**

1. ಇದರಲ್ಲಿ ಉಪಯೋಗಿಸಲಾಗಿರುವ ಸಾಮಾನ್ಯ ನಿವಾಸಿ ಎಂಬ ಪದವು 1950ರ ಜನತಾ ಪ್ರಾತಿನಿಧ್ಯ ಕಾಯಿದೆಯ 20ನೇ ಅನುಚ್ಛೇದದಲ್ಲಿನ ಅರ್ಥವನ್ನು ಹೊಂದಿರುತ್ತದೆ.
2. ಪರಿಶೀಲನಾ ಪ್ರಮಾಣಪತ್ರ ನೀಡುವ ಅಧಿಕೃತ ಅಧಿಕಾರಿಯು ಸರ್ಕಾರಿ ಆದೇಶ ಸಂಖ್ಯೆ: ಎಸ್.ಡಬ್ಲ್ಯೂ. 251 ಬಿ.ಸಿ.ಎ. 95 .ದಿನಾಂಕ 31/01/1995 ರನ್ವಯ ಮೇಲುಸ್ಥರ (Creamy layer) ದವರನ್ನು ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ಪತ್ರ ನೀಡತಕ್ಕದ್ದು.

## <u>ನಮೂನೆ-2</u>

## ಗ್ರಾಮೀಣ ಅಭ್ಯರ್ಥಿ ವ್ಯಾಸಂಗ ಪ್ರಮಾಣ ಪತ್ರ

ಸರ್ಕಾರದ ಆದೇಶ ಸಂಖ್ಯೆ ಡಿ.ಪಿ.ಐ.ಆರ್. 96 ಎಸ್.ಆರ್.ಆರ್. 2005 ಬೆಂಗಳೂರು ದಿನಾಂಕ 10-08-2005)

ಶ್ರೀ-------------- ರವರ ಮಗ /ಮಗಳು ಶ್ರೀ/ಪತ್ನಿ/ಶ್ರೀ ಶ್ರೀಮತಿ/ಕುಮಾರಿ--------------- ಜಿಲ್ಲೆ-----------ತಾಲ್ಲೂಕು-------------------ಗ್ರಾಮದಲ್ಲಿ-------------ವಾಸವಾಗಿರುವ ಇವರು ಒಂದನೇತರಗತಿಯಿಂದ------------ತರಗತಿಯವರೆಗೆ-----------ಜಿಲ್ಲೆ ---------------------ತಾಲ್ಲೂಕು-------------ಪಟ್ಟಣ ಶಾಲೆಯಲ್ಲಿ ವ್ಯಾಸಂಗ ಮಾಡಿ------------ ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯ ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕದ ಪೌರ ನಿಗಮಗಳ ಅಧಿನಿಯಮ 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964 ರ ಅಡಿಯಲ್ಲಿ ನಿರ್ದಿಷ್ಟ ಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು .

ಸ್ಥಳ:
ದಿನಾಂಕ:

ಸಹಿ
ಮುಖ್ಯೋಪಾಧ್ಯಾಯರು
ಮತ್ತು ಸಂಸ್ಥೆಯ ಮೊಹರು

ಸ್ಥಳ:
ದಿನಾಂಕ:

ಮೇಲುರುಜು
ಕ್ಷೇತ್ರ ಶಿಕ್ಷಣ ಅಧಿಕಾರಿ
ಕಛೇರಿಯ ಮೊಹರು

# ಗ್ರಾಮೀಣ ಪ್ರದೇಶ ಸಿಂಧುತ್ವ ಪ್ರಮಾಣ ಪತ್ರ

ಶ್ರೀ. ------------------------------ ರವರ ಮಗ/ ಮಗಳು/ ಪತ್ನಿ ಶ್ರೀ:ಶ್ರೀಮತಿ : ಕುಮಾರಿ: ----------------------------ಕಛೇರಿ ದಾಖಲಾತಿ ವಹಿಯ ನೋಂದಣಿ ಸಂಖ್ಯೆ-----------ದಿನಾಂಕ-------------ರ ಪ್ರಕಾರ------------------ ಜಿಲ್ಲೆ ------ ----------ತಾಲ್ಲೂಕು--------------ಹೋಬಳಿ/ಅಂಚೆ----------------ಗ್ರಾಮ ಪಂಚಾಯ್ತಿ----------------ಗ್ರಾಮದಲ್ಲಿ ವಾಸವಾಗಿರುವ ಇವರು -------**ನೇ** ತರಗತಿಯಿಂದ ----------**ನೇ** ತರಗತಿಯವರೆಗೆ----------------ಜಿಲ್ಲೆ -----------------ತಾಲ್ಲೂಕು- --------------ಪಟ್ಟಣ-----------------ಗ್ರಾಮ ಪಂಚಾಯ್ತಿ ------------------- ಗ್ರಾಮದ ಶಾಲಾ ಸಂಕೇತ----- ,----------------------------------------- ------------------ ಶಾಲೆಯಲ್ಲಿ ದಿನಾಂಕ -------ಯಿಂದ-----------ವರೆಗೆ ------ ----ನೇತರಗತಿಯಿಂದ--------------ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತಾರೆ ಎಂದು ದೃಢೀಕರಿಸಲಾಗಿದೆ.

**ಮುಖ್ಯೋಪಾಧ್ಯಾಯರು**
**-------------------ಶಾಲೆ**
**---------------- ತಾಲ್ಲೂಕು**

**ಮೇಲು ಸಹಿ/-**
**ಕ್ಷೇತ್ರ ಶಿಕ್ಷಣಾಧಿಕಾರಿಗಳು**
**-------------ತಾಲ್ಲೂಕು**
**--------------- ಜಿಲ್ಲೆ**

ಈ ಮೇಲೆ ತಿಳಿಸಿರುವ ವಿದ್ಯಾರ್ಥಿಯು ---------- ವರ್ಷದಿಂದ -------- ವರ್ಷದವರೆಗೆ ---- --------------------ಸ್ಥಳದಲ್ಲಿ (ಊರಿನ ಹೆಸರು) ವ್ಯಾಸಂಗ ಮಾಡಿದ್ದು, ಇವರು ವ್ಯಾಸಂಗ ಮಾಡಿದ ಅವಧಿಯಲ್ಲಿ ಸದರಿ ಶಾಲಾ ಪ್ರದೇಶವು ಈ ಕಛೇರಿಯ " constitutional Register" ರ ಪುಟ ಸಂಖ್ಯೆ------------ಮತ್ತು ಸರ್ಕಾರಿ ಆದೇಶ ಸಂಖ್ಯೆ--------------ರ ಪ್ರಕಾರ ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ (**ಮಹಾ ನಗರ ಸಭೆ/ನಗರ ಸಭೆ/ಪುರ ಸಭೆ / ಪಟ್ಟಣ ಪಂಚಾಯ್ತಿ / ಅಧಿಸೂಚಿತ ಪ್ರದೇಶ)** ಪ್ರದೇಶಗಳ ಹೊರತಾದ **ಮಂಡಳ/ಗ್ರಾಮ ಪಂಚಾಯ್ತಿ**) ಪ್ರದೇಶವಾಗಿತ್ತು ಎಂದು ದೃಢೀಕರಿಸಲಾಗಿದೆ.

**ಪುರ ಸಭೆ/ಪಟ್ಟಣ ಪಂಚಾಯ್ತಿ/ಅಧಿಸೂಚಿತ**
**ಪ್ರದೇಶ/ಮಂಡಳ/ಗ್ರಾಮ ಪಂಚಾಯ್ತಿಯ**
**ಅಧಿಕಾರಿಯ ಸಹಿ**
**ಕಛೇರಿಯ ಮೊಹರು**

## ಯೋಜನೆಗಳಿಂದ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿ

## ಪ್ರಮಾಣ ಪತ್ರ

ಶ್ರೀ/ಶ್ರೀಮತಿ---------------ರವರ ಮಗ/ ಮಗಳು/ ಪತ್ನಿ ಶ್ರೀ/ಶ್ರೀಮತಿ------------ರವರು ---------------ಜಿಲ್ಲೆ---------ತಾಲ್ಲೂಕು----------ಗ್ರಾಮದಲ್ಲಿ ವಾಸವಾಗಿರುವ ಇವರು/ಇವರ ಕುಟುಂಬದವರು ಅವಲಂಬಿತರಾಗಿದ್ದ ಈ ಕೆಳಕಂಡ ಆಸ್ತಿಯನ್ನು -------- ಇಸವಿಯಿಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ.

1. ವಾಸಿಸುವ ಮನೆ ಮತ್ತು ತಾವು ಅವಲಂಬಿತರಾಗಿದ್ದ ಅವರ ಕೃಷಿ ಭೂಮಿಯ ಅರ್ಧದಷ್ಟು.
2. ಯೋಜನೆಗೆ ಮೊದಲು ಭೂಮಿಯನ್ನು ಹೊಂದಿರದೇ ಯೋಜನೆಯಿಂದ ವಾಸಿಸುತ್ತಿದ್ದ ಮನೆ.
3. ತಾವು ಅವಲಂಬಿತರಾಗಿದ್ದ ತಮ್ಮ ಕೃಷಿ ಭೂಮಿಯ ಅರ್ಧದಷ್ಟು ಅಥವಾ ಅದಕ್ಕಿಂತ ಕಡಿಮೆ ಕೃಷಿ ಭೂಮಿ.
4. ಇತರೆ ಇನ್ನಾವುದೇ ಪ್ರಕರಣದಲ್ಲಿ ಯೋಜನೆಯಿಂದ ನಿರ್ವಸಿತರಾದವರು.

(ಅನ್ವಯವಾಗುವ ಐಟಂ ಮಾತ್ರ ಪ್ರಮಾಣ ಪತ್ರದಲ್ಲಿ ನಮೂದಿಸತಕ್ಕದ್ದು )

ತಹಶೀಲ್ದಾರ್

----------ತಾಲ್ಲೂಕು

**ಯೋಜನೆಗಳಿಂದ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳ ಪ್ರಮಾಣ ಪತ್ರದ ಜೊತೆಗೆ ಸಲ್ಲಿಸಬೇಕಾದ ನಮೂನೆ**

| | | |
|---|---|---|
| 1 | ಸ್ವಾಧೀನಪಡಿಸಿಕೊಂಡ ಆಸ್ತಿಯ ಮಾಲಿಕರ ಹೆಸರು | |
| 2 | ಯೋಜನೆಗಾಗಿ ಸ್ವಾಧಿನಪಡಿಸಿಕೊಳ್ಳಲಾದ ಆಸ್ತಿಯ ವಿವರ (ಮನೆ ನಂ/ಸರ್ವೆ ನಂಬರ/ಗ್ರಾಮ ಹೊಬಳಿ) | |
| 3 | ಸ್ವಾಧೀನಪಡಿಸಿಕೊಳ್ಳಲಾದ ದಿನಾಂಕ | |
| 4 | ಯೋಜನೆಯ ಹೆಸರು | |
| 5 | ಸ್ವಾಧೀನಪಡಿಸಿಕೊಳ್ಳಲಾದ ಆಸ್ತಿಯ ಸ್ವಾಧಿನಪಡಿಸಿಕೊಂಡ ದಿನಾಂಕದಿಂದ (05) ವರ್ಷಗಳ ಹಿಂದೆ ಯಾರ ಸ್ವಾಧೀನದಲ್ಲಿತ್ತು. | |
| 6 | ಸ್ವಾಧೀನಪಡಿಸಿಕೊಳ್ಳಲಾದ ಆಸ್ತಿಯ ಮಾಲೀಕರ ಹಾಗೂ ಅರ್ಜಿದಾರ ನಡುವಿನ ಸಂಬಂಧ | |
| 7 | ವಿವಾಹಿತ / ಅವಿವಾಹಿತ | |

ತಹಶೀಲ್ದಾರ್
---------ತಾಲ್ಲೂಕು

<u>ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 115 ಸೇನೆನಿ 2005, ದಿನಾಂಕ 19-11-2005</u>

# CERTIFICATE FOR THE PERSONS WITH DISABILITIES

**This is to Certify that Sri/Smt/Kum………………………………………………… Son/Wife/Daughter of Shri…………………………………………………… Age ………………….. old, Male/Female, Registration No……………………………………..is in a case of………………………………………He/She is Physically Disabled / visual disabled / speech & hearing disabled and had………% ( in words………………percent) Permanent (physical impairment / visual impairment/ speech & hearing impairment) in relation to his /her ……………………………………………**

**NOTE:**
**1. This condition is progressive/non-progressive/likely to improve/not likely to improve.***
**2. Re-assessment is not recommended/is recommended after a period of ........................... months/year ***

***Strike out which is not applicable.**

| (Recent attested Photograph showing the disability affixed here) |
|---|

**Sd/-**
**Arthopaedic /**
**Eye /ENT /Psychiatrist**
**Member, Medical Board**

**Sd/-**
**Senior Specialist**
**Member, Medical Board**

**Sd/-**
**Chairperson District Surgon District Hospital**

**Countersigned by the**
**Medical Superintendent CMO / Head of Hospital (with Seal)**

**Signature/Thumb impression**
**Of the disabled person.**

# GOVERNMENT OF KARNATAKA
# DEPARTMENT OF SAINIK WELFARE AND RESETTLEMENT

Office of the Deputy Director
Department of Sainik Welfare & Resettlement
(Karnataka)

No.----------------------------------- Date:-------------------------

## CERTIFICATE

This is to certify that Shri/Smt/Kum---------------------------is an applicant for --------------is the spouse /son/daughter of No----------Rank--------Name-------------------------------
of Army / Navy / Air Force, who is an Ex-serviceman according to the definition laid down by the Ministry of Defence, Government of India. He served from ---------------to --------------------

The Ex-Serviceman had declared his home town in Karnataka at the time of entry into service as per records & hence eligible to avail reserved seats under Ex-Serviceman quota. His permanent home address at the time of entry into service was as under:
Home address before joining service:

----------------------------------------------
----------------------------------------------

Place: Signature of the Deputy Director
Date: Department of Sainik Welfare & Resettlement
--------------------------------------District

OR

## CERTIFICATE

This is to certify that Shri/Smt/Kum---------------------------is an applicant for --------in Karnataka is the spouse /son/daughter of No----------Rank--------Name--------------------------- who died /disabled while in service according to the certificate issued by Defense Authority. He died / disabled on --------------------
Home address of the individual at the time of joining Defense Service as per the records is:
----------------------------------------------
----------------------------------------------

Place: Signature of the Deputy Director
Date: Department of Sainik Welfare & Resettlement
--------------------------------------District

**ಪ್ರಸ್ತುತವಾಗಿ ಸರ್ಕಾರಿ (ಕೇಂದ್ರ ಸರ್ಕಾರ /ಕರ್ನಾಟಕ ರಾಜ್ಯ ಸರ್ಕಾರ/ಇತರೆ ರಾಜ್ಯಗಳು) ಹಾಗೂ ಅನುದಾನಿತ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ನೇಮಕಾತಿ ಪ್ರಾಧಿಕಾರಿಗಳಿಂದ ಪಡೆಯಬೇಕಾದ ಅನುಮತಿ ಪತ್ರದ ನಮೂನೆ**

**(ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977 ಹಾಗೂ ಕರ್ನಾಟಕ ನಾಗರೀಕ ಸೇವೆಗಳು (ಪ್ರೊಬೇಷನರಿ) ನಿಯಮಗಳಂತೆ)**

# ಅನುಮತಿ ಪತ್ರ

ಶ್ರೀ/ಶೀಮತಿ ---------------------------------- ತಂದೆ ---------- ಇವರು ಪ್ರಸಕ್ತವಾಗಿ ಕೇಂದ್ರ/ರಾಜ್ಯಸರ್ಕಾರದ ------------------------ಇಲಾಖೆಯಲ್ಲಿ ಅನುದಾನಿತ ಸಂಸ್ಥೆಯಲ್ಲಿ -----------------ಹುದ್ದೆಯಲ್ಲಿ ಖಾಯಂ /ಹಂಗಾಮಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಸದರಿಯವರಿಗೆ 2010–11ನೇ ಸಾಲಿನ ವಸತಿ ಶಾಲೆಯ ಪ್ರಾಂಶುಪಾಲರು /ಶಿಕ್ಷಕರ ವೃಂದ/ ದೈಹಿಕ ಶಿಕ್ಷಕರು /ಕಂಪ್ಯೂಟರ್ ಶಿಕ್ಷಕರ ಹುದ್ದೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಲಾಗಿದೆ.

ಪ್ರಸ್ತುತ ನೇಮಕಾತಿ ಪ್ರಾಧಿಕಾರಿಗಳ ಪದನಾಮ
(ಕಛೇರಿಯ ಮೊಹರಿನೊಂದಿಗೆ)

# ಪಿಎಂಎಸ್‌ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

**ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ ಬೆಂಗಳೂರು**

ಇತ್ತೀಚಿನ
ಪಾಸ್‌ಪೋರ್ಟ್
ಸೈಜಿನ ಫೋಟೋ
ಲಗತ್ತಿಸುವುದು

## ಶುಶ್ರೂಷಕ ಹುದ್ದೆಗಳಿಗೆ ಅರ್ಜಿ ನಮೂನೆ

ವಿ.ಸೂ: 1) ಈ ನಮೂನೆಯಲ್ಲಿ ಕೇಳಿರುವ ಮಾಹಿತಿಗಳನ್ನು ಕನ್ನಡ ಭಾಷೆಯಲ್ಲಿ ಸ್ಪಷ್ಟವಾಗಿ ಭರ್ತಿ ಮಾಡಬೇಕು ತಿದ್ದುಪಡಿಗೆ ಅವಕಾಶವಿರುವುದಿಲ್ಲ.

2) ಒದಗಿಸಿದ ಮಾಹಿತಿಯು ಅಪೂರ್ಣವಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಬಹುದಾಗಿದೆ.

3) ಲಗತ್ತಿಸುವ ದಾಖಲೆಗಳನ್ನು ಕಡ್ಡಾಯವಾಗಿ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿರಬೇಕು.

ಕ್ರ.ಸಂ:
(ಕಚೇರಿ ಉಪಯೋಗಕ್ಕೆ)

| | | |
|---|---|---|
| 1. | ಅಭ್ಯರ್ಥಿಯ ಹೆಸರು<br>(ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿ ಇರುವಂತೆ) | |
| 2. | ಅಂಚೆ ವಿಳಾಸ ಮತ್ತು<br>ದೂರವಾಣಿ ಸಂಖ್ಯೆ: | |
| 3. | ಖಾಯಂ ವಿಳಾಸ | |
| 4. | ಹುಟ್ಟಿದ ದಿನಾಂಕ ಮತ್ತು ವಯಸ್ಸು<br>(ಅರ್ಜಿ ಸಲ್ಲಿಸಲು ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ ಆಗುವ ವಯಸ್ಸು ದಾಖಲೆ ಸಹಿತ) | |
| 5. | ಲಿಂಗ | ( ಗಂಡು / ಹೆಣ್ಣು ) |
| 6. | ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದ ವರ್ಗದಲ್ಲಿ ಅಥವಾ ಸರ್ಕಾರದ ಸ್ವಾಮ್ಯಕ್ಕೆ ಸೇರಿದ ಇಲ್ಲವೇ? ನಿಯಂತ್ರಣಕ್ಕೆ ಸೇರಿದ ನಿಗಮದಲ್ಲಿ ಸೇವೆ ಸಲ್ಲಿಸಿದವರೇ? ಹಾಗಿದ್ದರೆ ಎಷ್ಟು ವರ್ಷ? ಪ್ರತಿ ಲಗತ್ತಿಸುವುದು. | |
| 7. | ಜಾತಿ, ಜನಾಂಗ, ವರ್ಗ<br>(ಮೀಸಲಾತಿ ಸ್ಪಷ್ಟವಾಗಿ ನಮೂದಿಸುವುದು) | |
| 8. | ಒಳ ಮೀಸಲಾತಿ ವಿವರ<br>ಎ) ಅಂಗ ವಿಕಲರೇ?<br>ಬಿ) ಮಾಜಿ ಸೈನಿಕರೇ?<br>ಸಿ) ಮಹಿಳಾ ಅಭ್ಯರ್ಥಿ<br>ಡಿ) ಯೋಜನಾ ನಿರಾಶ್ರಿತರೇ?<br>ಇ) ಗ್ರಾಮೀಣ ಅಭ್ಯರ್ಥಿಯೇ?<br>ಎಫ್) ಕನ್ನಡ ಮಾಧ್ಯಮ ಅಭ್ಯರ್ಥಿಯೇ?<br>ನಿಗಧಿತ ದಾಖಲೆ ಲಗತ್ತಿಸುವುದು. | |

ಪು.ತಿ.ನೋ...

**-2-**

| | | | | | |
|---|---|---|---|---|---|
| 9. | ವಿದ್ಯಾರ್ಹತೆ<br>(ಹುದ್ದೆಗೆ ನಿಗದಿಪಡಿಸಿದ ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಲಗತ್ತಿಸುವುದು) | **ಒಟ್ಟು ಅಂಕ** | **ಗಳಿಸಿದ ಅಂಕ** | **ಶೇಕಡಾವಾರು** | |
| 1. | | | | | |
| 2. | | | | | |
| 3. | | | | | |
| 4. | | | | | |
| 10. | ಅರ್ಜಿ ಶುಲ್ಕ ಸಲ್ಲಿಸಿದ ವಿವರ ಬ್ಯಾಂಕ್ ಹೆಸರು ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆಯುವುದು. | **ಡಿ.ಡಿ ಸಂಖ್ಯೆ ಮತ್ತು ದಿನಾಂಕ** | | **ಮೊತ್ತ:** | |
| 11. | ಮದುವೆ ಆಗಿದ್ದೀರಾ? | ಹೌದು / ಇಲ್ಲ | | | |
| 12. | ಅನುಭವ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು. | | | | |
| 14. | ಇತರೇ ಶೈಕ್ಷಣಿಕ ವಿದ್ಯಾರ್ಹತೆಗಳು | | | | |

ನನಗೆ ತಿಳಿದಿರುವಂತೆ ಮೇಲೆ ಒದಗಿಸಲಾಗಿರುವ ಮಾಹಿತಿಯು ಸತ್ಯವೆಂದು ಮತ್ತು ಸಂಪೂರ್ಣವೆಂದು ಪ್ರಮಾಣೀಕರಿಸುತ್ತೇನೆ. ಸರ್ಕಾರಿ ಉದ್ಯೋಗಕ್ಕೆ ಸೇರಲು ಅನರ್ಹರಾಗುವಂತಹ ಯಾವ ಪೂರ್ವೋತ್ತರಗಳನ್ನು ನಾನು ಹೊಂದಿರುವುದಿಲ್ಲ.

ಸ್ಥಳ : **ಅಭ್ಯರ್ಥಿಯ ಸಹಿ:**

ದಿನಾಂಕ :